# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಭಾನುವಾರ, ಮಾರ್ಚ್ 20, 2022

ಸಂಪುಟ : 48 ಸಂಚಿಕೆ : 309 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 4.00 www.janathavani.com janathavani@mac.com


## ಹಾಸ್ಯವನ್ನು ಸಕಾರಾತ್ಮಕವಾಗಿ ಸ್ವೀಕರಿಸುವ ಗುಣ ಬೇಕು

### ಪ್ರೊ. ಎಸ್.ಬಿ. ರಂಗನಾಥ್ ಅಭಿನಂದನಾ ಗ್ರಂಥ ಲೋಕಾರ್ಪಣೆಯಲ್ಲಿ ತರಳಬಾಳು ಶ್ರೀ ಅಭಿಮತ



ದಾವಣಗೆರೆ, ಮಾ. 19 – ಹಾಸ್ಯ ಪ್ರಜ್ಞೆ ಇಲ್ಲದಿದ್ದರೆ ಜೀವನ ನೀರಸವಾಗುತ್ತದೆ. ಹಾಸ್ಯ ಪ್ರಜ್ಞೆ ಬೆಳೆಸಿಕೊಂಡು, ಬೇರೆಯವರು ನಮ್ಮ ಬಗ್ಗೆ ಹಾಸ್ಯ ಮಾಡಿದಾಗ ಅದನ್ನು ಸಕಾರಾತ್ಮಕವಾಗಿ ಸ್ವೀಕರಿಸುವ ಗುಣ ಬೆಳೆಸಿಕೊಳ್ಳಬೇಕು ಎಂದು ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ತಿಳಿಸಿದ್ದಾರೆ.

ನಗರದ ಕುವೆಂಪು ಕನ್ನಡ ಭವನದಲ್ಲಿ ಆಯೋಜಿಸಲಾಗಿದ್ದ ಪ್ರೊ.ಎಸ್.ಬಿ. ರಂಗನಾಥ್ ಅವರಿಗೆ ಸಹಸ್ರ ಚಂದ್ರದರ್ಶನ ಅಭಿನಂದನೆ ಮತ್ತು 'ರಂಗ ವಿಸ್ತಾರ' ಅಭಿನಂದನಾ ಗ್ರಂಥ ಲೋಕಾರ್ಪಣೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಮಾತನಾಡುತ್ತಿದ್ದರು.

ಸಾಹಿತಿ ಬಿ.ಎಲ್. ವೇಣು ಅವರು ಚುನಾವಣಾ ಸಂದರ್ಭದಲ್ಲಿ ತಮ್ಮನ್ನು ಹಾಸ್ಯ ಮಾಡುತ್ತಾ, ಎಲ್ಲ ಸ್ವಾಮೀಜಿಗಳು ಸೇರಿ ತಮ್ಮನ್ನೇ ಮುಖ್ಯಮಂತ್ರಿ ಮಾಡಿದ್ದಾರೆ ಎಂದು ಲೇಖನ ಬರೆದಿದ್ದರು. ಇದಕ್ಕೆ ಅಷ್ಟೇ ಹಾಸ್ಯವಾಗಿ ಅವರಿಗೆ ಪತ್ರ ಬರೆದ ತಾವು, ಸದ್ಯಕ್ಕೆ ಕೆಲ ಸ್ವಾಮೀಜಿಗಳನ್ನು ಸಚಿವರನ್ನಾಗಿ ಮಾಡಿದ್ದೇವೆ. ವಿದೇಶ ಪ್ರವಾಸ ಮುಗಿಸಿ ಬಂದ ನಂತರ ಉಳಿದವರನ್ನು ನೇಮಿಸಲಾಗುವುದು ಎಂದು ಹೇಳಿದ್ದೆ ಎಂದು ನೆನಪಿಸಿಕೊಂಡರು.

ರಂಗನಾಥ್ ಅವರು ಹಿಡಿದ ಕೆಲಸವನ್ನು ಪಟ್ಟು ಬಿಡದೇ ಮಾಡುತ್ತಿದ್ದರು. ಹೀಗಾಗಿ ಹಿರಿಯ ಸ್ವಾಮೀಜಿಗಳು ಅವರಿಗೆ 'ಅಂಟುಗ' ಎಂಬ ಹೆಸರಿಟ್ಟಿದ್ದರು. ಈ ಕನ್ನಡ ಭವನ ನಿರ್ಮಾಣದ ಸಂದರ್ಭದಲ್ಲೂ ನಮ್ಮನ್ನು ಅಂಟಿಕೊಂಡು ಕೆಲಸ ಮಾಡಿಸಿಕೊಂಡರು. ಅವರಿಗೆ 80 ವರ್ಷದ ಸನ್ಮಾನದ ಮೂಲಕ, ಗಾಲಿಗೆ 'ರಿ-ಟೈರ್ಡ್' ಮಾಡುವ ರೀತಿಯಲ್ಲೇ ಚೇತನ ನೀಡಲಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಾಹಿತಿ ಬಿ.ಎಲ್. ವೇಣು, ರಂಗನಾಥ್ ಅವರು ಅಧ್ಯಾಪಕರಾಗಿ, (5ನೇ ಪುಟಕ್ಕೆ)

## ಕೋಡಿಹಳ್ಳಿ-ಕಕ್ಕರಗೊಳ್ಳ ಬಯಲು ಬಹಿರ್ದೆಸೆ ಮುಕ್ತ ಗ್ರಾಮವಾಗಿಸಲು ಜಿಲ್ಲಾಧಿಕಾರಿ ಸೂಚನೆ

**ಜಿಲ್ಲಾಧಿಕಾರಿಗಳ ನಡೆ ಹಳ್ಳಿಯ ಕಡೆ ಕಾರ್ಯಕ್ರಮ**

ದಾವಣಗೆರೆ, ಮಾ.19-ಕೋಡಿಹಳ್ಳಿ ಮತ್ತು ಕಕ್ಕರಗೊಳ್ಳ ಗ್ರಾಮಗಳನ್ನು ದತ್ತು ಪಡೆದು, ಸಂಪೂರ್ಣ ಬಯಲು ಬಹಿರ್ದೆಸೆ ಮುಕ್ತ ಗ್ರಾಮವಾಗಿಸ ಬೇಕು ಎಂದು ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಸೂಚಿಸಿದರು.

ತಾಲ್ಲೂಕಿನ ಕಕ್ಕರಗೊಳ್ಳ ಗ್ರಾಮ ಪಂಚಾಯತಿ ವ್ಯಾಪ್ತಿಯ ಕೋಡಿಹಳ್ಳಿ ಗ್ರಾಮದಲ್ಲಿ ಶನಿವಾರ ಏರ್ಪಡಿಸಲಾಗಿದ್ದ ಜಿಲ್ಲಾಧಿಕಾರಿಗಳ ನಡೆ-ಹಳ್ಳಿಯ ಕಡೆ, ಗ್ರಾಮ ವಾಸ್ತವ್ಯ ಕಾರ್ಯಕ್ರಮದಲ್ಲಿ ಅವರು ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯನ್ನು ಬಯಲು ಶೌಚ ಮುಕ್ತ ಜಿಲ್ಲೆಯಾಗಿ ಘೋಷಣೆ ಮಾಡಲಾಗಿದೆ ಅಷ್ಟೆ. ಆದರೆ ಗ್ರಾಮೀಣ ಪ್ರದೇಶಗಳಲ್ಲಿ ಬೆಳಿಗ್ಗೆ ಹಾಗೂ ರಾತ್ರಿಯ ವೇಳೆ ಗ್ರಾಮ



ಪ್ರವೇಶ ಸಂದರ್ಭದಲ್ಲಿ ಬಯಲು ಶೌಚಕ್ಕೆ ಕೂರುವ ದೃಶ್ಯಗಳೇ ಅಧಿಕಾರಿಗಳನ್ನು ಸ್ವಾಗತಿಸುತ್ತವೆ. ಶೌಚಾಲಯ ಕಟ್ಟಿಸಲು ಇನ್ನೂ ಕೆಲವರು ಇಲ್ಲಸಲ್ಲದ ನೆಪಗಳನ್ನು ಹೇಳಿದರೆ, ಕಟ್ಟಿಸಿಕೊಂಡಿರುವ ಶೌಚಾಲಯಗಳನ್ನು ಕೆಲವರು ಬಳಕೆ ಮಾಡದೆ, ಕಟ್ಟಿಗೆ ಮುಂತಾದ ಸಾಮಗ್ರಿ ತುಂಬಿಡುವ (2ನೇ ಪುಟಕ್ಕೆ)

## ನವೀನ್ ದೇಹ ದಾನಕ್ಕೆ ಕುಟುಂಬದವರ ನಿರ್ಧಾರ



ಹಾವೇರಿ, ಮಾ. 19- ಉಕ್ರೇನ್‌ನಲ್ಲಿ ಮೃತಪಟ್ಟ ನವೀನ್ ಗ್ಯಾನಗೌಡರ್ ಮೃತದೇಹವನ್ನು ವೈದ್ಯಕೀಯ ಉದ್ದೇಶಕ್ಕಾಗಿ ದಾನ ಮಾಡಲು ಕುಟುಂಬದವರು ನಿರ್ಧರಿಸಿದ್ದಾರೆ.

ನವೀನ್ ಕಳೆದ ಮಾ.1ರಂದು ಉಕ್ರೇನ್ ಖಾರ್ಕೀವ್‌ನಲ್ಲಿ ನಡೆದ ದಾಳಿಯಲ್ಲಿ ಸಾವನ್ನಪ್ಪಿದ್ದರು. ಅವರ ಮೃತದೇಹವನ್ನು ಸೋಮವಾರ ಬೆಳಿಗ್ಗೆ ಬೆಂಗಳೂರಿಗೆ ತರಲಾಗುತ್ತಿದೆ.

ನನ್ನ ಮಗನಿಗೆ ವೈದ್ಯಕೀಯ ಕ್ಷೇತ್ರದಲ್ಲಿ ಸಾಧನೆ ಮಾಡುವ ಆಸೆ ಇತ್ತು. ಆ ಆಸೆ ಈಡೇರಲಿಲ್ಲ. ಬೇರೆ ವೈದ್ಯಕೀಯ ವಿದ್ಯಾರ್ಥಿಗಳ (2ನೇ ಪುಟಕ್ಕೆ)






## ಪಠ್ಯದಲ್ಲಿ ಭಗವದ್ಗೀತೆ ; ವಿರೋಧವಿಲ್ಲ : ಸಿದ್ದು

ಬೆಂಗಳೂರು, ಮಾ. 19 - ಪಠ್ಯ ಪುಸ್ತಕದಲ್ಲಿ ಭಗವದ್ಗೀತೆ ಸೇರಿಸಲು ತಮ್ಮ ವಿರೋಧವಿಲ್ಲ ಎಂದು ವಿಧಾನಸಭೆ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ತಿಳಿಸಿದ್ದಾರೆ.

ನೈತಿಕ ವಿಷಯವನ್ನು ಶಾಲಾ ಮಕ್ಕಳಿಗೆ ಕಲಿಸಲು ನಮ್ಮ ತಕರಾರು ಇಲ್ಲ. ನಾವು ಸಂವಿಧಾನ ಮತ್ತು ಜಾತ್ಯತೀತತೆಯಲ್ಲಿ ನಂಬಿಕೆ ಇಟ್ಟವರು ಎಂದಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಕ್ಕಳಿಗೆ ಭಗವದ್ಗೀತೆ, ಖುರಾನ್, ಬೈಬಲ್ ಯಾವು (2ನೇ ಪುಟಕ್ಕೆ)

## ಶಿಕ್ಷಣದ ಕೇಸರೀಕರಣ ; ತಪ್ಪೇನಿದೆ?: ನಾಯ್ಡು

ಹರಿದ್ವಾರ, ಮಾ. 19 – ಮೆಕಾಲೆ ಶಿಕ್ಷಣ ಪದ್ಧತಿಯನ್ನು ದೇಶದಿಂದ ಸಂಪೂರ್ಣ ತೊಡೆದು ಹಾಕಬೇಕು ಎಂದಿರುವ ಉಪ ರಾಷ್ಟ್ರಪತಿ ವೆಂಕಯ್ಯ ನಾಯ್ಡು, ಭಾರತೀಯತೆಯ ಬಗ್ಗೆ ಹೆಮ್ಮೆ ಹೊಂದಿರಬೇಕು ಎಂದು ತಿಳಿಸಿದ್ದಾರೆ. ಸೌತ್ ಏಷಿಯನ್ ಇನ್‌ಸ್ಟಿಟ್ಯೂಟ್ ಆಫ್ ಪೀಸ್ ಅಂಡ್ ರಿಕನ್ಸಲಿಯೇಷನ್ ಸಂಸ್ಥೆಯ ವತಿಯಿಂದ ಆಯೋಜಿಸಲಾಗಿದ್ದ ಕಾರ್ಯ (2ನೇ ಪುಟಕ್ಕೆ)

## ವೈಕುಂಠ ಸಮಾರಾಧನೆ ಆಹ್ವಾನ



ಜನನ : 09.02.1942, ಮರಣ : 11.03.2022

**ಶ್ರೀ ಕೇತಿನೀಡಿ ರಾಮಕೃಷ್ಣರವರು**

ಮಾಜಿ ಅಧ್ಯಕ್ಷರು, ಕಮ್ಮವಾರಿ ಸಂಘದ ಕಟ್ಟಡ ಸಮಿತಿ, ಮಾಜಿ ಉಪಾಧ್ಯಕ್ಷರು, ಕಮ್ಮವಾರಿ ಸಂಘ, ದಾವಣಗೆರೆ.

ಇವರು ದಿನಾಂಕ : 11.03.2022 ದೈವಾಧೀನರಾಗಿದ್ದು, ಮೃತರ ಆತ್ಮಶಾಂತಿಗಾಗಿ

"ವೈಕುಂಠ ಸಮಾರಾಧನೆ"ಯನ್ನು

ದಿನಾಂಕ 21.03.2022ನೇ ಸೋಮವಾರ ಬೆಳಿಗ್ಗೆ 10.30ಕ್ಕೆ ದಾವಣಗೆರೆ ತಾಲ್ಲೂಕಿನ ಶ್ಯಾಗಲೆ ಕ್ಯಾಂಪ್‌ನಲ್ಲಿರುವ ಮೃತರ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ. ತಾವುಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದು, ಮೃತರ ಪವಿತ್ರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

**ದುಃಖತಪ್ತ ಕುಟುಂಬ ವರ್ಗ**

ಫೋ. : 99455 56263, 98865 98861

## ಆರನೇ ವರ್ಷದ ಪುಣ್ಯಸ್ಮರಣೆ



**ಶ್ರೀಮತಿ ಸರೋಜ ಹೆಚ್.ಎಂ.**

ನೇತ್ರದಾನಿ ಮತ್ತು ದೇಹದಾನಿ, ನಿಧನ : 20.03.2016

ಲೇ|| ಪಂಚಾಕ್ಷರಯ್ಯನವರ ಪುತ್ರಿ

ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಬ್ಯಾಂಕಿನ ನಿವೃತ್ತ ಪ್ರಧಾನ ವ್ಯವಸ್ಥಾಪಕರು.

ನಿಮ್ಮ ಬದುಕು ಇಲ್ಲವಾದರೂ, ನಿಮ್ಮ ನೆನಪು ಅಮರ
ಅಂಧರಿಗೆ ದೃಷ್ಟಿಕೊಟ್ಟು ಮರೆಯಾದ ನಿಮ್ಮನ್ನು ಮರೆತಿಲ್ಲ,
ಸದಾ ನಿಮ್ಮ ಸ್ಮರಣೆಯಲ್ಲಿರುವ.....

ಸಹೋದರರು, ಸಹೋದರಿಯರು ಹಾಗೂ ಬಂಧು-ಮಿತ್ರರು.

## ಎರಡನೇ ವರ್ಷದ ಪುಣ್ಯಸ್ಮರಣೆ



**ಕುಮಾರಿ ಮಮತಾ ವಿ.**

ಜನನ : 22.11.1988 - ನಿಧನ : 20.03.2020

ಎಂ.ಕಾಂ., ಉಪನ್ಯಾಸಕರು, ವಿಶ್ವಭಾರತಿ ವಿದ್ಯಾ ಕಾಲೇಜು, ದಾವಣಗೆರೆ.

ದಾವಣಗೆರೆ ಎಲ್ಲಮ್ಮ ನಗರ ವಾಸಿ

ಶ್ರೀ ವೀರಭದ್ರಪ್ಪ, ಶ್ರೀಮತಿ ಎಸ್.ವಿ. ಮಂಜುಳ ಮತ್ತು ಮಕ್ಕಳು

ಇವರು ಮಾಡುವ ವಿಜ್ಞಾಪನೆಗಳು

ನಮ್ಮ ಮುದ್ದಿನ ಕಣ್ಮಣಿಯೇ ನಗು ನಗುತ ಪ್ರೀತಿಯ ಚಿಲುಮೆಯಾಗಿ ನಮ್ಮೊಂದಿಗಿದ್ದು ನಮ್ಮನ್ನೆಲ್ಲಾ ಅಗಲಿ ಬಾರದ ಲೋಕಕ್ಕೆ ಹೋಗಿ ಇಂದಿಗೆ ಎರಡು ವರ್ಷಗಳಾದವು ಮತ್ತೊಮ್ಮೆ ಹುಟ್ಟಿ ಬಾ ಎಂದು ಎದುರು ನೋಡುತ್ತಿರುವ ಹಾಗೂ ನಿನ್ನ ಆತ್ಮಕ್ಕೆ ದೇವರು ಶಾಂತಿ ನೀಡಲಿ ಹಾಗೂ ಸದಾ ನಿನ್ನ ನೆನಪಿನಲ್ಲಿರುವ...

ಅಪ್ಪ, ಅಮ್ಮ, ಅಕ್ಕ : ರೂಪ, ಅಣ್ಣ : ಮಲ್ಲಿಕಾರ್ಜುನ್ ಹಾಗೂ ಬಂಧು-ಮಿತ್ರರು.

99166 47939, 81235 45950,70226 37093 , 87469 51446




# ಸಮಾಜಕ್ಕೆ ವಚನ ಸಾಹಿತ್ಯ ಮಾದರಿಯಾಗಬೇಕಿದೆ



## ಜಗಳೂರಿನ ಶರಣ ಚಿಂತನ ಕಾರ್ಯಕ್ರಮದಲ್ಲಿ ಸಾಣೇಹಳ್ಳಿ ಶ್ರೀ ಪಂಡಿತಾರಾಧ್ಯ ಸ್ವಾಮೀಜಿ ಆಶಯ

ಜಗಳೂರು,ಮಾ.19- 12 ನೇ ಶತಮಾನದಲ್ಲಿನ ವಚನ ಸಾಹಿತ್ಯ ಸಮಾಜಕ್ಕೆ ಮಾದರಿಯಾಗಬೇಕಿದೆ. ಶರಣ ಸಾಹಿತ್ಯ ಪರಿಷತ್ತು ಜವಾಬ್ದಾರಿಯುತವಾಗಿ ಸ್ವಯಂ ಜಾಗೃತರಾಗಿ ವಚನಗಳನ್ನು ಓದಿ ಅರ್ಥೈಸಿಕೊಂಡು ಸಮಾಜ ಜಾಗೃತಗೊಳಿಸಬೇಕು ಎಂದು ಸಾಣೇಹಳ್ಳಿ ತರಳಬಾಳು ಶಾಖಾಮಠದ ಶ್ರೀ ಡಾ. ಪಂಡಿತರಾಧ್ಯ ಶಿವಚಾರ್ಯ ಸ್ವಾಮೀಜಿ ತಿಳಿಸಿದರು.

ಪಟ್ಟಣದ ನಾಲಂದ ಬಿ.ಎಡ್ ಕಾಲೇಜಿನ ಸಭಾಂಗಣದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ವತಿಯಿಂದ ಶನಿವಾರ ಆಯೋಜಿಸಿದ್ದ ಸೇವಾದೀಕ್ಷೆ ಹಾಗೂ ಶರಣ ಚಿಂತನಾ ಕಾರ್ಯಕ್ರಮದಲ್ಲಿ ಅವರು ದಿವ್ಯ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಮನುಷ್ಯ ಸಂಕುಚಿತ ಮನೋಭಾವನೆ ತೊರೆದು ಶರಣ ಸಾಹಿತ್ಯದಿಂದ ಜಾಗೃತರಾಗಿ ಉತ್ತಮವಾದ ವಿಚಾರಗಳನ್ನು ಸಮಾಜಕ್ಕೆ ಪಸರಿಸಬೇಕು.

ವೈಚಾರಿಕವಾಗಿ, ಮಾನಸಿಕವಾಗಿ ದುರ್ಬಲರಾದರೆ ವಿನಾಶದ ಅಂಚಿನಲ್ಲಿದ್ದಂತೆ, ಮನುಷ್ಯ ಯಾವುದೇ ಕ್ಷೇತ್ರದಲ್ಲಿ ವೃತ್ತಿ ಅಲಂಕರಿಸಿದ್ದರೂ ಸಾಹಿತ್ಯಿಕವಾಗಿ ಆಸಕ್ತಿ ಮೈಗೂಡಿಸಿಕೊಳ್ಳಬೇಕು.ಇದಕ್ಕೆ ಲೀಡ್ ಬ್ಯಾಂಕ್ ನಿವೃತ್ತ ಮ್ಯಾನೇಜರ್ ಎನ್.ಟಿ. ಎರ್ರಿಸ್ವಾಮಿ ಸಾಕ್ಷಿಯಾಗಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಇಂದು ಸಮಾಜದಲ್ಲಿ ಜನತೆ ಹಲವಾರು ತಲ್ಲಣಗಳನ್ನು ಅನುಭವಿಸುತ್ತಿದ್ದಾರೆ. ಮಾನವೀಯತೆ ಕಳೆದುಕೊಂಡ ರಷ್ಯಾ ದೇಶ ಅಧಿಕಾರ, ಹಣದ ದರ್ಪದಲ್ಲಿ ವರ್ತಿಸುತ್ತಿದೆ. ಪ್ರತಿಭಟಿಸುವ ಶಕ್ತಿಗೆ ಯಾರೊಬ್ಬರೂ ಮುಂದಾಗಿಲ್ಲ ಪ್ರತಿರೋಧಿಸುವ ಮನಸ್ಸುಗಳು ಒಂದಾಗಬೇಕು.

ಬಸವಣ್ಣನವರ ವಚನಗಳು ವಿನಯ, ವಿವೇಕವನ್ನು ಹೆಚ್ಚಿಸುತ್ತವೆ. ಶರಣರ ವಚನಗಳನ್ನು ಸಮಾಜದಲ್ಲಿ ಬಿತ್ತಿ ಗೊಬ್ಬರ, ನೀರುಣಿಸಿ ಪೋಷಣೆಯೊಂದಿಗೆ ಉತ್ತಮ ಫಸಲು ಬೆಳೆದು ಊಟ ಮಾಡಬೇಕು. ಶರಣ ಸಾಹಿತ್ಯ ಸಾಗರವಿದ್ದಂತೆ. ಪ್ರತಿ ವಚನವೂ ಅಜ್ಞಾನದಿಂದ ಜ್ಞಾನದ ಕಡೆಗೆ, ಹಿಂಸೆಯಿಂದ ಅಹಿಂಸೆಯಡೆಗೆ ಸಾಗಿಸುತ್ತವೆ. ಆಂತರಿಕ ಕೋಲಾಹಲ ದಮನ ಮಾಡುವ ಶಕ್ತಿ ವಚನಕ್ಕಿದೆ. ಉಕ್ರೇನ್ ನಂತಹ ಘಟನೆ ಮರುಕಳಿಸುವುದಿಲ್ಲ ಎಂದು ಕಿವಿಮಾತು ಹೇಳಿದರು.

ವಿದ್ಯಾರ್ಥಿಗಳಿಗೆ ವಚನಗೀತೆ, ಪ್ರಬಂಧ ಸ್ಪರ್ಧೆ, ರೂಪಕ, ನೃತ್ಯಗಳೊಂದಿಗೆ ವಚನಗಳಿಂದ ಹೊಸ ಪರಂಪರೆ ರೂಪಿಸಬಹುದು, ಶರಣ ಸಾಹಿತ್ಯಕ್ಕೆ ಸಂಘಟನಾತೀತವಾಗಿ ಒಗ್ಗೂಡಬೇಕು. ಪ್ರಗತಿಪರವಾದ ವಿಚಾರಗಳಾಗಬೇಕು, ಹೋಳಿ ಹಬ್ಬದ ಬಣ್ಣಕ್ಕಿಂತ ಒಳ್ಳೆಯ ಆಲೋಚನೆ, ಕಳಕಳಿಯಿಂದ ಮಾನವೀಯ ಮೌಲ್ಯಗಳನ್ನು ಮಕ್ಕಳಲ್ಲಿ ಬಿತ್ತಬೇಕು ಎಂದರು.

ಮೌಢ್ಯಗಳನ್ನು ಬಿತ್ತುವಶಕ್ತಿಗಳು ಹೆಚ್ಚಾಗಿವೆ. ವೈಚಾರಿಕತೆ, ವೈಜ್ಞಾನಿಕತೆ ಕಣ್ಮರೆಯಾಗುತ್ತಿವೆ ಎಂದು ಶ್ರೀಗಳು ಬೇಸರ ವ್ಯಕ್ತಪಡಿಸಿದರು.

ಸಾಹಿತಿ ಎನ್.ಟಿ. ಯರ್ರಿಸ್ವಾಮಿ ಮಾತನಾಡಿ, ಸೇವಾ ದೀಕ್ಷೆ ಹೊಣೆಗಾರಿಕೆಯಿದ್ದಂತೆ. ಶ್ರೀಗಳ ಸಲಹೆ, ಸೂಚನೆಯಂತೆ ಸಾಗೋಣ ಎಂದು ಕರೆ ನೀಡಿದರು. ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಕೆ.ಬಿ. ಪರಮೇಶ್ವರಪ್ಪ ಮಾತನಾಡಿದರು.

ಕದಳಿ ಮಹಿಳಾ ವೇದಿಕೆ ಜಿಲ್ಲಾಧ್ಯಕ್ಷರಾದ ಕುಸುಮಾ ಲೋಕೇಶ್, ಇಮಾಂ ಟ್ರಸ್ಟ್ ಅಧ್ಯಕ್ಷ ಜೆ.ಕೆ. ಹುಸೇನ್ ಮಿಯ್ಯಾ ಸಾಬ್, ಪ.ಪಂ.ಮಾಜಿ ಉಪಾಧ್ಯಕ್ಷೆ ಲಲಿತಮ್ಮ, ಪ್ರಾಂಶುಪಾಲರಾದ ರೂಪಕಲಾ, ಕಲ್ಲೇಶ್, ಸಾಹಿತಿಗಳಾದ ಡಿ.ಸಿ.ಮಲ್ಲಿಕಾರ್ಜುನ್, ರಾಜಪ್ಪ, ಗೀತಾ ಮಂಜು, ಕಸಾಪ ತಾಲ್ಲೂಕು ಅಧ್ಯಕ್ಷರಾದ ಸುಜಾತ, ವಿಶ್ವಮಾನವ ಮಂಟಪದ ಆವರಗೆರೆ ರುದ್ರಮುನಿ, ಪತ್ರಕರ್ತರ ಸಂಘದ ತಾಲ್ಲೂಕು ಅಧ್ಯಕ್ಷ ಜಿ. ಎಸ್.ಚಿದಾನಂದಪ್ಪ ಮುಂತಾದವರು ಉಪಸ್ಥಿತರಿದ್ದರು.

# ಕುಂಬಳೂರಿನಲ್ಲಿ ಸಂಭ್ರಮದ ರಥೋತ್ಸವ



ಮಲೇಬೆನ್ನೂರು, ಮಾ. 19- ಕುಂಬಳೂರು ಗ್ರಾಮದ ಆರಾಧ್ಯ ದೈವ ಶ್ರೀ ಹನುಮಂತ ದೇವರ ರಥೋತ್ಸವವು ಶನಿವಾರ ಮಧ್ಯಾಹ್ನ ಸಂಭ್ರಮದಿಂದ ಜರುಗಿತು.

ಉಪ ತಹಶೀಲ್ದಾರ್ ಆರ್. ರವಿ ರಥಕ್ಕೆ ಪೂಜೆ ಸಲ್ಲಿಸಿ, ರಥೋತ್ಸವಕ್ಕೆ ಚಾಲನೆ ನೀಡಿದರು. ಗ್ರಾಮ ಲೆಕ್ಕಾಧಿಕಾರಿ ಶ್ರೀಧರ್, ದೇವಸ್ಥಾನದ ಪ್ರಮುಖರಾದ ಗೌಡ್ರ ಪರಮೇಶ್ವರಪ್ಪ, ಹುಲ್ಮನಿ ನಿಂಗಪ್ಪ, ಎನ್. ಕಲ್ಲೇಶ್, ಕೆ. ಪರಮೇಶ್ವರಪ್ಪ, ವೈ. ವಿರೂಪಾಕ್ಷಪ್ಪ, ಗೌಡ್ರು ಹರೀಶ್, ಶಿವಕುಮಾರ್, ರೇವಣಸಿದ್ದಪ್ಪ, ಕೆ. ತೀರ್ಥಪ್ಪ, ಹಳೇಮನೆ ಶಂಭುಲಿಂಗಪ್ಪ, ಜಿ. ಶಂಕರೇಗೌಡ, ಆರ್.ಹೆಚ್. ಬಸವರಾಜಪ್ಪ, ಎಂ.ಹೆಚ್. ರಮೇಶ್ ಸೇರಿದಂತೆ ಇನ್ನೂ ಅನೇಕರು ಈ ವೇಳೆ ಹಾಜರಿದ್ದರು.

ನಾಳೆ ಭಾನುವಾರ ಬೆಳಗಿನ ಜಾವ 5 ಗಂಟೆಗೆ ಶ್ರೀ ಸ್ವಾಮಿಯ ಮಹಾರಥೋತ್ಸವ ಜರುಗಲಿದೆ. 10 ಗಂಟೆಗೆ ಸಾಮೂಹಿಕ ವಿವಾಹ ಏರ್ಪಡಿಸಲಾಗಿದೆ. ಮಧ್ಯಾಹ್ನ 3 ರ ನಂತರ ಮುಳ್ಳೋತ್ಸವ, ರಾತ್ರಿ 9 ಗಂಟೆಗೆ ಕಂಕಣ ವಿಸರ್ಜನೆ, ಓಕಳಿ, ಭೂತಗಳ ಮಣೇವು ಸೇವೆ ನೆರವೇರಲಿದೆ.

# ಬಯಲು ಬಹಿರ್ದೆಸೆ ಮುಕ್ತ ಗ್ರಾಮವಾಗಿಸಲು ಸೂಚನೆ





(1ನೇ ಪುಟದಿಂದ) ಕೋಠಡಿಯನ್ನಾಗಿಸಿದ್ದಾರೆ ಎಂದರು. ತಹಶೀಲ್ದಾರರ ಕಚೇರಿಗಳಲ್ಲಿ ವೃದ್ಧಾಪ್ಯ ವೇತನ, ವಿಧವಾ ವೇತನ ಸೇರಿದಂತೆ ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳು, ಹಾಗೂ ವಿವಿಧ ಸೌಲಭ್ಯಗಳನ್ನು ಫಲಾನುಭವಿಗಳಿಗೆ ದೊರಕಿಸಲು ಮಧ್ಯವರ್ತಿಗಳ ಹಾವಳಿ ಹೆಚ್ಚಾಗಿದ್ದು, ಇದನ್ನು ತಡೆಗಟ್ಟಲು ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಕಾರ್ಯಕ್ರಮದ ಅಂಗವಾಗಿ ವೃದ್ಧಾಪ್ಯವೇತನ, ವಿಧವಾ ವೇತನ, ಮನಸ್ವಿನಿ ಸೇರಿದಂತೆ ವಿವಿಧ ಯೋಜನೆಗಳಡಿ ಒಟ್ಟು 134 ಫಲಾನುಭವಿಗಳಿಗೆ ಸೌಲಭ್ಯಗಳನ್ನು ಮಂಜೂರು ಮಾಡಲಾಗಿದ್ದು, ಎರಡೂ ಗ್ರಾಮಗಳಲ್ಲಿ ಮತ್ತೊಮ್ಮೆ ಸರ್ವೆ ಮಾಡಿಸಿ, ಸಾಮಾಜಿಕ ಭದ್ರತೆ ಯೋಜನೆಯ ಸೌಲಭ್ಯ ಪಡೆಯಲು ಅರ್ಹರಿರುವ ಫಲಾನುಭವಿಗಳನ್ನು ಗುರುತಿಸಿ, ಅವರಿಗೂ ಸವಲತ್ತು ಮಂಜೂರು ಮಾಡಲಾಗುವುದು ಎಂದರು.

ಕೋಡಿಹಳ್ಳಿ ಗ್ರಾಮಕ್ಕೆ ಬಸ್ ಸೌಲಭ್ಯ ಒದಗಿಸುವಂತೆ ಗ್ರಾಮಸ್ಥರು ಕೋರಿದ್ದು, ಸೋಮವಾರದಿಂದಲೇ ಈ ಗ್ರಾಮಕ್ಕೆ ಬಸ್ ಸಂಚಾರ ಪ್ರಾರಂಭಿಸಲಾಗುವುದು. ಗ್ರಾಮಸ್ಥರು ಆದಷ್ಟು ಬಸ್ ಸೌಲಭ್ಯವನ್ನೇ ಬಳಸುವಂತೆ ಮನವಿ ಮಾಡಿದರು.

ಕಾರ್ಯಕ್ರಮದ ನಡುವೆ ಗ್ರಾಮಸ್ಥರೊಬ್ಬರು ಬೆಂಬಲ ಬೆಲೆಯಲ್ಲಿ ರಾಗಿ ಖರೀದಿಗೆ ಕ್ರಮ ಕೈಗೊಳ್ಳುವಂತೆ ಮಾಡಿದ ಮನವಿಗೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿಗಳು, ರೈತರ ಮನವಿಯಂತೆ ದೊಡ್ಡ ಹಿಡುವಳಿದಾರ ರೈತರಿಂದಲೂ ಅಲ್ಲದೇ, ಗರಿಷ್ಟ 50 ಕ್ವಿಂ. ವರೆಗೂ ರಾಗಿ ಖರೀದಿಗೆ ಅನುಮತಿ ನೀಡುವಂತೆ ಈಗಾಗಲೇ ಸರ್ಕಾರಕ್ಕೆ ಜಿಲ್ಲಾಡಳಿತದಿಂದ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಹೇಳಿದರು.

ಶಾಸಕ ಎಸ್.ಎ ರವೀಂದ್ರನಾಥ್ ಕಾರ್ಯಕ್ರಮ ಉದ್ಘಾಟಿಸಿ ಕೋಡಿಹಳ್ಳಿ, ಕಕ್ಕರಗೊಳ್ಳ ಗ್ರಾಮಗಳು ಭದ್ರಾ ಅಚ್ಚುಕಟ್ಟು ಭಾಗದ ಕೊನೆಯ ಪ್ರದೇಶವಾಗಿದೆ. ದೇವರಬೆಳಕೆರೆ ಪಿಕಪ್ ಡ್ಯಾಮ್ ಮೂಲಕ ಚಾನೆಲ್ ನೀರು ಹರಿದು ಬರುತ್ತಿರುವ ಕಾರಣದಿಂದಾಗಿ ಗ್ರಾಮವು ನೀರಾವರಿ ಪ್ರದೇಶವಾಗಿದೆ. ಹಿಂದಿನ ದಿನಗಳಲ್ಲಿ ತೊಗರಿ, ನವಣೆ, ಕೊತ್ತಂಬರಿಯಂತಹ ಬೆಳೆಗಳನ್ನು ರೈತರು ಬೆಳೆಯುತ್ತಿದ್ದರು, ಪ್ರಸ್ತುತ ದಿನಗಳಲ್ಲಿ ಭದ್ರಾ ಚಾನೆಲ್ ನೀರಿನ ಸೌಲಭ್ಯವಿದ್ದು, ರೈತರು ಉತ್ತಮ ಬೆಳೆಗಳನ್ನು ಬೆಳೆಯಬೇಕು. ದಾವಣಗೆರೆ ತಾಲ್ಲೂಕಿನಲ್ಲಿ ಅತೀ ಹೆಚ್ಚು ಶೋಷಣೆಗೆ ಒಳಗಾದ ಗ್ರಾಮ ಮತ್ತು ಮೂಲಭೂತ ಸೌಲಭ್ಯ ವಂಚಿತ ಗ್ರಾಮ ಕೋಡಿಹಳ್ಳಿ ಆಗಿದೆ. ಆದ್ದರಿಂದ ಜಿಲ್ಲಾಧಿಕಾರಿಗಳು ಗ್ರಾಮ ವಾಸ್ತವ್ಯದ ಮೂಲಕ ಗ್ರಾಮದ ಸಮಸ್ಯೆಗಳನ್ನು ಪರಿಹರಿಸಬೇಕೆಂದು ಹೇಳಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಚನ್ನಪ್ಪ, ಉಪವಿಭಾಗಾಧಿಕಾರಿ ಮಮತಾ ಹೊಸಗೌಡರ್ ಮಾತನಾಡಿದರು.

ಕಾರ್ಯಕ್ರಮದ ಉದ್ಘಾಟನೆಗೂ ಮುನ್ನ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ನೇತೃತ್ವದ ಅಧಿಕಾರಿಗಳ ತಂಡವನ್ನು ಗ್ರಾಮದಲ್ಲಿ ಪೂರ್ಣ ಕುಂಭ ಹೊತ್ತ ಮಹಿಳೆಯರು, ಡೊಳ್ಳುವಾದನದ ಸಹಿತ ಭವ್ಯವಾಗಿ ಸ್ವಾಗತಿಸಿದರು. ಅಲ್ಲದೆ ಎತ್ತಿನಗಾಡಿಯಲ್ಲಿ ಅಧಿಕಾರಿಗಳ ಮೆರವಣಿಗೆ ಸಾಗಿಬಂದಿತು. ಬಳಿಕ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಮಟ್ಟದ ವಿವಿಧ ಅಧಿಕಾರಿಗಳು ಗ್ರಾಮದ ಪರಿಶಿಷ್ಟರ ಕಾಲೋನಿಗೆ ಭೇಟಿ ನೀಡಿ ಜನರ ಬಳಿ ಸಮಸ್ಯೆಗಳ ಕುರಿತು ಚರ್ಚಿಸಿದರು.

ಕಾರ್ಯಕ್ರಮದ ಅಂಗವಾಗಿ ವಿವಿಧ ಫಲಾನುಭವಿಗಳಿಗೆ ಸರ್ಕಾರದ ಸೌಲಭ್ಯಗಳ ಮಂಜೂರಾತಿ ಪತ್ರ, ಹಕ್ಕುಪತ್ರಗಳನ್ನು ವಿತರಿಸಲಾಯಿತು. ಅಲ್ಲದೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಗರ್ಭಿಣಿಯರಿಗೆ ವೇದಿಕೆಯಲ್ಲಿಯೇ ಸೀಮಂತ ಕಾರ್ಯಕ್ರಮ ನಡೆಸಲಾಯಿತು.

ಕಾರ್ಯಕ್ರಮದಲ್ಲಿ ಶಾಸಕರಾದ ಎಸ್.ಎ. ರವೀಂದ್ರನಾಥ್ ಅವರು ತಮ್ಮ ಪತ್ನಿ ರತ್ನಮ್ಮ ಅವರ ಸಹಿತ ಪಾಲ್ಗೊಂಡಿದ್ದರು. ಕಕ್ಕರಗೊಳ್ಳ ಗ್ರಾ.ಪಂ. ಅಧ್ಯಕ್ಷ ಗುತ್ತೆಪ್ಪ, ಉಪಾಧ್ಯಕ್ಷೆ ಆಶಾ, ಪ್ರಭಾರ ಅಪರ ಜಿಲ್ಲಾಧಿಕಾರಿ ನಜ್ಮಾ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಸಮಾರಂಭದಲ್ಲಿ ಭಾಗವಹಿಸಿದ್ದರು. ಆರೋಗ್ಯ ಇಲಾಖೆಯಿಂದ ಸಾರ್ವಜನಿಕರ ಉಚಿತ ಆರೋಗ್ಯ ತಪಾಸಣೆ ಕಾರ್ಯಕ್ರಮ ವೇದಿಕೆಯ ಬಳಿ ಇದೇ ಸಂದರ್ಭದಲ್ಲಿ ಜರುಗಿತು.

# ಗ್ರಾಮೀಣ ಜನರ ಏಳಿಗೆಗೆ ಶ್ರಮಿಸುತ್ತಿರುವ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಗೆ ಶಾಸಕ ರಾಮಪ್ಪ ಮೆಚ್ಚುಗೆ



ಮಲೇಬೆನ್ನೂರು, ಮಾ.19- ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ 'ನಮ್ಮೂರು-ನಮ್ಮ ಕೆರೆ' ಕಾರ್ಯಕ್ರಮದಡಿಯಲ್ಲಿ ಪುನಶ್ಚೇತನಗೊಳಿಸಿರುವ ಕೊಕ್ಕನೂರು ಗ್ರಾ.ಪಂ. ವ್ಯಾಪ್ತಿಯ ಜಿ.ಟಿ.ಕಟ್ಟೆ ಗ್ರಾಮದ ಶ್ರೀ ಆಂಜನೇಯ ಸ್ವಾಮಿ ಸಮ್ಮುಖದಲ್ಲಿ ಗ್ರಾಮಸ್ಥರಿಗೆ ಹಸ್ತಾಂತರ ಮಾಡಲಾಯಿತು.

ಕೆರೆ ಅಭಿವೃದ್ಧಿ ಮಾಹಿತಿ ಫಲಕವನ್ನು ಅನಾವರಣ ಗೊಳಿಸಿದ ಶಾಸಕ ಎಸ್.ರಾಮಪ್ಪ ಮಾತನಾಡಿ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮೂಲಕ ಡಾ. ವೀರೇಂದ್ರ ಹೆಗ್ಗಡೆ ಅವರು ಗ್ರಾಮೀಣ ಜನರ ಏಳಿಗೆಗೆ ಶ್ರಮಿಸುತ್ತಿದ್ದಾರೆ.

ಸ್ವ-ಸಹಾಯ ಸಂಘಗಳ ಮೂಲಕ ಮಹಿಳೆಯರು ಸ್ವಾವಲಂಬಿ ಜೀವನ ನಡೆಸುವಂತೆ ಮಾಡಿದ್ದಾರೆ. ರೈತರಿಗೆ, ವಿದ್ಯಾರ್ಥಿಗಳಿಗೆ, ವೃದ್ಧರಿಗೆ ನೆರವಾಗಿದ್ದು, ಈಗ ಕೆರೆಗಳನ್ನು ಅಭಿವೃದ್ಧಿಪಡಿಸಿ, ಊರಿಗೆ ನೀರಿನ ಆಸರೆ ಕಲ್ಪಿಸಿಕೊಟ್ಟಿದ್ದಾರೆ. ಸರ್ಕಾರ ಮಾಡುವ ಕೆಲಸವನ್ನು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮಾಡುತ್ತಿದೆ ಎಂದು ಶಾಸಕ ರಾಮಪ್ಪ ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಗ್ರಾಮಕ್ಕೆ ವಿವಿಧ ಯೋಜನೆಯಡಿ ಈಗಾಗಲೇ ಸುಮಾರು 1 ಕೋಟಿ ರೂ. ಅನುದಾನ ನೀಡಿದ್ದೇನೆ. ಕೊಳದ ಮಲ್ಲೇಶ್ವರ ದೇವಸ್ಥಾನ ರಸ್ತೆ ಅಭಿವೃದ್ಧಿಗೆ 40 ಲಕ್ಷ ರೂ. ಅನುದಾನ ನೀಡಲಾಗಿದೆ ಎಂದು ರಾಮಪ್ಪ ತಿಳಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಯೋಜನೆಯ ಜಿಲ್ಲಾ ನಿರ್ದೇಶಕ ಜಯಂತ್ ಪೂಜಾರಿ ಅವರು ಮತ್ತು ಇದುವರೆಗೆ ರಾಜ್ಯದಲ್ಲಿ 346 ಜಿಲ್ಲೆಯಲ್ಲಿ ಈಗಾಗಲೇ 15 ಕೆರೆಗಳನ್ನು ಪುನಶ್ಚೇತನಗೊಳಿಸಿದ್ದೇನೆ. ಕೆರೆ ಬಳಿ ತಿಪ್ಪೆಗಳನ್ನು ಹಾಕದೇ ಸ್ವಚ್ಛತೆ ಕಾಪಾಡಿ, ಗಿಡ-ಮರಗಳನ್ನು ಬೆಳೆಸಿ ಸುಂದರ ವಾತಾವರಣ ಸೃಷ್ಟಿ ಮಾಡಿ ಎಂದು ಗ್ರಾಮಸ್ಥರಿಗೆ ಮನವಿ ಮಾಡಿದರು.

ಕೆರೆಗಳ ಸಂರಕ್ಷಣೆಯಿಂದ ಗ್ರಾಮಕ್ಕೆ ಒಳಿತಾಗಲಿದ್ದು, ಹರಿಹರ ತಾಲ್ಲೂಕಿನಲ್ಲಿ ಎಷ್ಟೇ ಕೆರೆ ಇದ್ದರೂ ಅಭಿವೃದ್ಧಿ ಪಡಿಸಿಕೊಡುತ್ತೇವೆ. ಇದಕ್ಕೆ ಗ್ರಾಮಸ್ಥರ ಸಹಕಾರ ಮುಖ್ಯ ಎಂದರು.

ಕೊಕ್ಕನೂರು ಗ್ರಾ.ಪಂ. ಅಧ್ಯಕ್ಷ ಓ.ಬಿ. ನಿಂಗನಗೌಡ, ಗ್ರಾಮದ ರೇವಣಸಿದ್ದಪ್ಪ ಮಾತನಾಡಿದರು. ಕೆರೆ ಸಮಿತಿ ಅಧ್ಯಕ್ಷ ಜಿ.ಪಿ. ನಾಗರಾಜಪ್ಪ ಅಧ್ಯಕ್ಷತೆ ವಹಿಸಿದ್ದರು.

ಗ್ರಾ.ಪಂ. ಪಿಡಿಓ ನಾಗರಾಜ್ ಸಾರಥಿ, ಕೆರೆ ಸಮಿತಿಯ ಉಪಾಧ್ಯಕ್ಷ ಟಿ.ರಾಮಪ್ಪ, ಮುಖಂಡರಾದ ಸಿ.ಹೆಚ್.ಸಿದ್ದಪ್ಪ, ಬೀರಪ್ಪ, ದೇವಪ್ಪ, ಯೋಜನೆಯ ಇಂಜಿನಿಯರ್ ಮಂಜುನಾಥ್, ಒಕ್ಕೂಟದ ಅಧ್ಯಕ್ಷ ಮಲ್ಲೇಶಪ್ಪ, ಸೇವಾ ಪ್ರತಿನಿಧಿ ಚಂದ್ರಮ್ಮ, ತಾ. ಕೃಷಿ ಅಧಿಕಾರಿ ಗಂಗಾಧರ್, ಗ್ರಾ.ಪಂ. ಸದಸ್ಯರಾದ ಜಿ. ಮಹೇಶ್ವರಪ್ಪ, ಹೆಚ್.ಬೀರಪ್ಪ, ಮಂಗಳಮ್ಮ, ವಸಂತಮ್ಮ ಹಾಗೂ ಕೆರೆ ಸಮಿತಿಯ ಸದಸ್ಯರು ಭಾಗವಹಿಸಿದ್ದರು.

ಮಲೇಬೆನ್ನೂರು ಯೋಜನಾಧಿಕಾರಿ ವಸಂತ್ ದೇವಾಡಿಗ ಸ್ವಾಗತಿಸಿದರು. ಮಲೇಬೆನ್ನೂರು ಮೇಲ್ವಿಚಾರಕ ಸಂತೋಷ್ ನಿರೂಪಿಸಿದರು. ಕೊಕ್ಕನೂರು ಮೇಲ್ವಿಚಾರಕರಾದ ಶ್ರೀಮತಿ ಶಾರದಾ ವಂದಿಸಿದರು.

# ಹೊನ್ನಾಳಿ : ಅಪ್ಪು ಜನ್ಮದಿನ ಬುದ್ಧಿಮಾಂಧ್ಯ ಮಕ್ಕಳಿಗೆ ನೆರವು



ಹೊನ್ನಾಳಿ, ಮಾ.19- ಪುನೀತ್ ರಾಜ್‌ಕುಮಾರ್ ಹುಟ್ಟು ಹಬ್ಬದ ಸ್ಮರಣಾರ್ಥ ತಾಲ್ಲೂಕು ವಿಶ್ವ ಕರ್ನಾಟಕ ರಕ್ಷಣಾ ವೇದಿಕೆಯಿಂದ ಅರ್ಥಪೂರ್ಣ ಕಾರ್ಯಕ್ರಮ ಆಯೋಜಿಸಿರುವುದು ನಿಜಕ್ಕೂ ಶ್ಲಾಘನೀಯ ಎಂದು ಉಪವಿಭಾಗಾಧಿಕಾರಿ ಹುಲ್ಲುಮನಿ ತಿಮ್ಮಣ್ಣ ಮೆಚ್ಚುಗೆ ವ್ಯಕ್ತಪಡಿಸಿದರು.

ಪಟ್ಟಣದ ಶ್ರೀ ಮಂಜುನಾಥೇಶ್ವರ ಬುದ್ಧಿಮಾಂಧ್ಯ ಮಕ್ಕಳ ವಸತಿ ಶಾಲೆಯಲ್ಲಿ 'ವಿಶ್ವ ಕರ್ನಾಟಕ ರಕ್ಷಣಾ ವೇದಿಕೆ' ಮತ್ತು 'ಹೆಲ್ಪಿಂಗ್ ಹ್ಯಾಂಡ್ಸ್ ಸೇವಾ ಫೌಂಡೇಶನ್' ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ಉಚಿತ ಬೆಡ್ ಶೀಟ್, ದಿಂಬು ಮತ್ತು ಕುರ್ಚಿ ವಿತರಣಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಈ ಸಂದರ್ಭದಲ್ಲಿ ಸಿಪಿಐ ಟಿ.ವಿ. ದೇವರಾಜ್, ಪುರಸಭೆ ಮುಖ್ಯಾಧಿಕಾರಿ ಎಸ್.ಆರ್.ವೀರಭದ್ರಯ್ಯ, ವೇದಿಕೆಯ ಗೌರವಾಧ್ಯಕ್ಷ ಕತ್ತಿಗೆ ನಾಗರಾಜ್, ಅಧ್ಯಕ್ಷ ಪ್ರದೀಪ್, ಪದಾಧಿಕಾರಿಗಳಾದ ಅಪ್ಪು, ಸೋಮೇಶ್ವರಯ್ಯ, ನರಸಿಂಹ, ಅಭಿ, ರುದ್ರೇಶ, ವೀರೇಂದ್ರ ಪಾಟೀಲ್, ನಿಖಿಲ್, ಆಕಾಶ್, ರಂಗನಾಥ್ ಮತ್ತಿತರರಿದ್ದರು.

## ನವೀನ್ ದೇಹ ದಾನಕ್ಕೆ ಕುಟುಂಬದವರ ನಿರ್ಧಾರ

(1ನೇ ಪುಟದಿಂದ) ಮುಖಾಂತರವಾದರೂ, ಅವನ ಮೃತದೇಹ ವೈದ್ಯಕೀಯ ಕ್ಷೇತ್ರಕ್ಕೆ ಬಳಕೆಯಾಗಲಿ ಎಂಬ ಉದ್ದೇಶದಿಂದ ಈ ನಿರ್ಧಾರ ತೆಗೆದುಕೊಂಡಿರುವುದಾಗಿ ನವೀನ್ ತಂದೆ ಶೇಖರಪ್ಪ ಗ್ಯಾನಗೌಡರ್ ತಿಳಿಸಿದ್ದಾರೆ.

ಸೋಮವಾರ ಬೆಳಿಗ್ಗೆ 9 ಗಂಟೆಗೆ ರಾಣೇಬೆನ್ನೂರಿನ ಚಳಗೇರಿ ಗ್ರಾಮಕ್ಕೆ ಪಾರ್ಥಿವ ಶರೀರ ಬರಲಿದೆ. ವೀರಶೈವ ಪದ್ಧತಿ ಪ್ರಕಾರ ಪೂಜಾ ಕಾರ್ಯ ನೆರವೇರಿಸಲಾಗುವುದು. ನಂತರ ದಾವಣಗೆರೆಯ ಎಸ್.ಎಸ್. ಆಸ್ಪತ್ರೆಗೆ ದೇಹ ದಾನ ಮಾಡುವುದಾಗಿ ಅವರು ಹೇಳಿದ್ದಾರೆ.

## ಶಿಕ್ಷಣದ ಕೇಸರೀಕರಣ ; ತಪ್ಪೇನಿದೆ?: ನಾಯ್ಡು

(1ನೇ ಪುಟದಿಂದ) ಕ್ರಮದಲ್ಲಿ ಅವರು ಮಾತನಾಡುತ್ತಿದ್ದರು.

ಶಿಕ್ಷಣದಲ್ಲಿ ಭಾರತೀಯತೆ ಬರಬೇಕು ಎಂಬುದು ನೂತನ ಶಿಕ್ಷಣ ನೀತಿಯ ಪ್ರಧಾನ ಉದ್ದೇಶ. ಈ ನೀತಿಯಲ್ಲಿ ಮಾತೃಭಾಷೆಗೆ ಅತಿ ಹೆಚ್ಚಿನ ಒತ್ತು ನೀಡಲಾಗಿದೆ ಎಂದು ನಾಯ್ಡು ಹೇಳಿದ್ದಾರೆ.ಶಿಕ್ಷಣ ಕೇಸರೀಕರಣಗೊಳಿಸುತ್ತಿದ್ದೇವೆ ಎಂದು ನಮ್ಮ ಮೇಲೆ ಆರೋಪಿಸಲಾಗುತ್ತಿದೆ. ಆದರೆ, ಕೇಸರೀಕರಣದಲ್ಲಿ ತಪ್ಪೇನಿದೆ? ಎಂದು ಉಪರಾಷ್ಟ್ರಪತಿ ಪ್ರಶ್ನಿಸಿದ್ದಾರೆ.

ಮೆಕಾಲೆ ಶಿಕ್ಷಣ ಪದ್ಧತಿ ಮೂಲಕ ವಿದೇಶಿ ಭಾಷೆಯನ್ನು ಶಿಕ್ಷಣ ಮಾಧ್ಯಮವಾಗಿ ಹೇರಲಾಗಿತ್ತು. ಇದರಿಂದಾಗಿ ಶಿಕ್ಷಣ ಉನ್ನತರಿಗೆ ಮಾತ್ರ ಸೀಮಿತವಾಗಿತ್ತು ಎಂದವರು ತಿಳಿಸಿದ್ದಾರೆ.

ಶತಮಾನದ ವಸಾಹತುಶಾಹಿ ನಮ್ಮನ್ನು ನಾವು ಕೀಳಾಗಿ ಕಾಣುವುದನ್ನು ಕಲಿಸಿತ್ತು. ಇದರಿಂದಾಗಿ ದೇಶದ ಪ್ರಗತಿಗೆ ಹಿನ್ನಡೆಯಾಗಿತ್ತು. ಆದರೆ, ನಮ್ಮ ಪರಂಪರೆ, ನಮ್ಮ ಸಂಸ್ಕೃತಿ, ನಮ್ಮ ಪೂರ್ವಿಕರ ಬಗ್ಗೆ ನಮಗೆ ಹೆಮ್ಮೆ ಇರಬೇಕು ಎಂದವರು ಹೇಳಿದ್ದಾರೆ.

## ಕೌಶಲ್ಯ ತರಬೇತಿಗೆ ಸಂದರ್ಶನ

ದಾವಣಗೆರೆ, ಮಾ.19-ಕೆನರಾ ಬ್ಯಾಂಕ್ ಗ್ರಾಮೀಣ ಸ್ವ-ಉದ್ಯೋಗ ತರಬೇತಿ ಸಂಸ್ಥೆ, ರೇಷ್ಮೆ ಇಲಾಖೆ ಆವರಣ, ಹಳೇ ತೋಳಹುಣಸೆ ಹಾಗು ಜಿಲ್ಲಾ ಪಂಚಾಯತ್ ಇವರ ಸಂಯುಕ್ತ ಆಶ್ರಯದಲ್ಲಿ ಜಿಲ್ಲೆಯ ಬಡತನ ರೇಖೆಗಿಂತ ಕೆಳಗಿರುವ ಗ್ರಾಮೀಣ ಮಟ್ಟದ ಯುವಕ, ಯುವತಿಯರಿಗೆ ಕೌಶಲ್ಯ ತರಬೇತಿ ಹಮ್ಮಿಕೊಳ್ಳಲಾಗಿದೆ. ಇದೇ ದಿನಾಂಕ 26ರಂದು ತರಬೇತಿ ಸಂಸ್ಥೆಯಲ್ಲಿ ನಡೆಯುವ ಸಂದರ್ಶನದಲ್ಲಿ ಪಾಲ್ಗೊಳ್ಳಬೇಕು. ವಿವರಗಳಿಗೆ ಸಂಪರ್ಕಿಸುವ ದೂರವಾಣಿ : 79751 39332, 70199 80484, 99641 11314, 95383 95817, 94819 77076.


॥ ಶ್ರೀ ವೆಂಕಟೇಶ್ವರ ಪ್ರಸನ್ನ ॥

**ಕೈಲಾಸ ಶಿವಗಣಾರಾಧನೆಯ ಆಹ್ವಾನ ಪತ್ರಿಕೆ**



ದಾವಣಗೆರೆ ಜಿಲ್ಲೆ, ಹರಿಹರ ತಾಲ್ಲೂಕು ಹಿಂಡಸಘಟ್ಟ ಗ್ರಾಮದ ವಾಸಿ
ಐದಂಕಣದರ ಶ್ರೀಮತಿ ಮಮತ ಶ್ರೀ ಹನುಮನಗೌಡ ಐ.
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 16.03.2022ನೇ ಬುಧವಾರ ಬೆಳಗಿನ ಜಾವ 5.30ಕ್ಕೆ
ನನ್ನ ಪೂಜ್ಯ ತಾಯಿಯವರಾದ

**ಐದಂಕಣದರ ಶ್ರೀಮತಿ ಈರಮ್ಮನವರು**

ಶಿವೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**ಕೈಲಾಸ ಶಿವಗಣಾರಾಧನೆಯನ್ನು**

**ದಿನಾಂಕ 20.03.2022ನೇ ಭಾನುವಾರ ಬೆಳಿಗ್ಗೆ 10.30ಕ್ಕೆ**
ಹಿಂಡಸಘಟ್ಟ ಗ್ರಾಮದಲ್ಲಿರುವ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ಬಯಸುವ,

ಇಂತಿ ದುಃಖತಪ್ತರು

**ಐದಂಕಣದರ ಶ್ರೀಮತಿ ಮಮತ ಶ್ರೀ ಹನುಮನಗೌಡ ಐ.,**
ಎ.ಜಿ.ಎಂ. ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿಯಮಿತ, ದಾವಣಗೆರೆ.
**ಮತ್ತು ಸಹೋದರಿಯರು, ಐದಂಕಣದರ ವಂಶಸ್ಥರು, ಮಾವಂದಿರು, ಅಳಿಯಂದಿರು, ಮಕ್ಕಳು, ಮೊಮ್ಮಕ್ಕಳು, ಹಿಂಡಸಘಟ್ಟ ಗ್ರಾಮಸ್ಥರು ಹಾಗೂ ಬಂಧು ಮಿತ್ರರು.**



॥ ಶ್ರೀ ಮೈಲಾರಲಿಂಗೇಶ್ವರ ಪ್ರಸನ್ನ ॥ ॥ ಶ್ರೀ ಚಂದ್ರಗುತ್ತೆಮ್ಮ ಪ್ರಸನ್ನ ॥

**ಕೈಲಾಸ ಸಮಾರಾಧನೆ ಆಹ್ವಾನ**



ದಾವಣಗೆರೆ ತಾಲ್ಲೂಕು, ಜಿಲ್ಲೆ
ಬಟ್ಟಲಕಟ್ಟೆ ಗ್ರಾಮದ ವಾಸಿ
ಶ್ರೀ ಜಿ.ಎಂ. ಗುಡ್ಡಪ್ಪ ಮತ್ತು
ಶ್ರೀ ಜಿ.ಎಂ. ನಿಂಗಪ್ಪ ಮತ್ತು ಮಕ್ಕಳು
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 09.03.2022ನೇ ಬುಧವಾರ ಬೆಳಿಗ್ಗೆ 11.45ಕ್ಕೆ ನಮ್ಮ ಪೂಜ್ಯ ತಾಯಿಯವರಾದ

**ಶ್ರೀಮತಿ ದುರುಗಮ್ಮನವರು**

(ದಿ॥ ಶ್ರೀ ಗೌಡ್ರ ಮಲ್ಲಪ್ಪನವರ ಧರ್ಮಪತ್ನಿ)
ಇವರು ದೈವಾಧೀನರಾದ ಪ್ರಯುಕ್ತ
ಮೃತರ ಆತ್ಮಶಾಂತಿಗಾಗಿ

**"ಕೈಲಾಸ ಸಮಾರಾಧನೆ"ಯನ್ನು**

ದಿನಾಂಕ : 21.03.2022ನೇ ಸೋಮವಾರ ಬೆಳಿಗ್ಗೆ 10.30ಕ್ಕೆ ದಾವಣಗೆರೆ ತಾಲ್ಲೂಕು ಬಟ್ಟಲಕಟ್ಟೆ ಗ್ರಾಮದ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :

ಶ್ರೀಮತಿ ಸುಧಾ ಜಿ. ಶ್ರೀ ಗುಡ್ಡಪ್ಪ ಜಿ.ಎಂ. ಮತ್ತು ಶ್ರೀಮತಿ ನಾಗಮ್ಮ
ಶ್ರೀ ಜಿ.ಎಂ. ನಿಂಗಪ್ಪ ಮತ್ತು ಮಕ್ಕಳು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು

ವಿ.ಸೂ. : ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ, ಆಗಮಿಸಬೇಕಾಗಿ ವಿನಂತಿ.


# ಪಠ್ಯದಲ್ಲಿ ಭಗವದ್ಗೀತೆ ; ವಿರೋಧವಿಲ್ಲ : ಸಿದ್ದು

(1ನೇ ಪುಟದಿಂದ) ದನ್ನಾದರೂ ಹೇಳಿಕೊಡಲಿ, ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಸಿಗಬೇಕಾದದ್ದು ಮುಖ್ಯ. ಇಂದಿನ ಸ್ಪರ್ಧಾತ್ಮಕ ಜಗತ್ತಿಗೆ ಅನುಗುಣವಾಗಿ ಉತ್ತಮ ಶಿಕ್ಷಣ ಸಿಗಬೇಕು. ಭಗವದ್ಗೀತೆ ಹೇಳಿಕೊಟ್ಟರೆ ತಪ್ಪೇನಿಲ್ಲ ಎಂದರು.

ನಮಗೂ ಮನೆಯಲ್ಲಿ ರಾಮಾಯಣ, ಮಹಾಭಾರತ, ಭಗವದ್ಗೀತೆ ಹೇಳಿಕೊಟ್ಟಿದ್ದಾರೆ. ನಾವೇನು ಹಿಂದೂಗಳಲ್ಲವೇ? ಹಳ್ಳಿಗಳಲ್ಲಿ ನಾಟಕಗಳಲ್ಲಿ ಇವುಗಳನ್ನು ಹಾಡೋದು ನೋಡಿದ್ದೇವೆ. ನಾವು ಭಗವದ್ಗೀತೆ, ಖುರಾನ್, ಬೈಬಲ್ ಇವು ಯಾವುದಕ್ಕೂ ವಿರೋಧ ಮಾಡಲ್ಲ. ನಮ್ಮದು ಬಹು ಸಂಸ್ಕೃತಿಯ ದೇಶ, ಶಿಕ್ಷಣದಲ್ಲಿ ಕಲಿಸುವ ವಿಷಯ ಸಂವಿಧಾನ ಬದ್ಧವಾಗಿರಬೇಕು ಅಷ್ಟೆ. ಸಹಿಷ್ಣುತೆ ಮತ್ತು ಸಹಬಾಳ್ವೆಯಲ್ಲಿ ನಮಗೆ ನಂಬಿಕೆ ಇದೆ ಎಂದವರು ಹೇಳಿದ್ದಾರೆ.

'ದಿ ಕಾಶ್ಮೀರಿ ಫೈಲ್' ಸಿನೆಮಾ ಮೂಲಕ ಸತ್ಯ ತೋರಿಸಿದ್ರೆ ಯಾರಿಗೂ ತೊಂದರೆ ಇಲ್ಲ. ಕಾಶ್ಮೀರದಲ್ಲಿ ಭಯೋತ್ಪಾದಕರು ಏನೆಲ್ಲಾ ಮಾಡಿದರು, ಕಾಶ್ಮೀರಿ ಪಂಡಿತರಿಗೆ ಏನು ತೊಂದರೆ ಮಾಡಿದರು, ಆ ಕಾಲದಲ್ಲಿ ಯಾರ ಸರ್ಕಾರ ಇತ್ತು? ಇದನ್ನೆಲ್ಲ ತೋರಿಸಬೇಕು. ಸತ್ಯ ಹೇಳಿದ್ರೆ ಯಾರಿಗೂ ಸಮಸ್ಯೆ ಇಲ್ಲ. ಇದರ ಜೊತೆಗೆ ಲಖಿಂಪುರ್‌ನ ಹಿಂಸಾಚಾರದ ಸಿನೆಮಾವನ್ನು ಮಾಡಿ ಜನರಿಗೆ ತೋರಿಸಲಿ ಎಂದವರು ತಿಳಿಸಿದ್ದಾರೆ.

ನಾನು ಚಿತ್ರಮಂದಿರಕ್ಕೆ ಹೋಗಿ ಸಿನೆಮಾ ನೋಡಿದ್ದು ತುಂಬಾ ಕಡಿಮೆ, ಬಹುತೇಕ ಸಿನೆಮಾಗಳನ್ನು ನಾನು ನೋಡಿಲ್ಲ, ಅದರಲ್ಲಿ ಇದೂ ಒಂದು. ಸಿನೆಮಾ ನೋಡಲೇ ಬೇಕು ಅಂತ ಎಲ್ಲಿದೆ? ಎಂದವರು ಹೇಳಿದ್ದಾರೆ.

ನಮ್ಮದು ಮೃದು ಹಿಂದುತ್ವವಾಗಲೀ, ಕಠೋರ ಹಿಂದುತ್ವವಾಗಲೀ ಅಲ್ಲ. ನಾವು ಹಿಂದೂ ಧರ್ಮದಲ್ಲಿ ನಂಬಿಕೆ ಇಟ್ಟಿದ್ದೇವೆ, ಸಂವಿಧಾನ ಹೇಳಿದಂತೆ ಎಲ್ಲ ಧರ್ಮಗಳನ್ನು ಸಮಾನವಾಗಿ ಗೌರವಿಸುತ್ತೇವೆ. ಅದು ಇತರೆ ಧರ್ಮಗಳಾದ ಕ್ರಿಶ್ಚಿಯನ್ ಧರ್ಮ ಆಗಿರಲಿ, ಮುಸ್ಲಿಂ ಧರ್ಮ ಆಗಿರಲಿ, ಸಿಖ್ ಧರ್ಮವಾಗಿರಲಿ, ಪಾರಸಿ ಧರ್ಮವಾಗಿರಲಿ, ಬೌದ್ಧ ಧರ್ಮ ಆಗಿರಲಿ ಎಲ್ಲವನ್ನೂ ಸಮಾನವಾಗಿ ಕಾಣುತ್ತೇವೆ ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

ಹಿಜಾಬ್ ತೀರ್ಪಿನ ಬಗ್ಗೆ ಅಸಮಾಧಾನ ಇರುವವರು ಬಂದ್ ಮಾಡಿದ್ದಾರೆ, ಆದರೆ ನ್ಯಾಯಾಂಗದ ನಿರ್ಣಯವನ್ನು ಯಾರೂ ಕೂಡ ವಿರೋಧ ಮಾಡಬಾರದು ಎಂದವರು ಮತ್ತೊಂದು ಪ್ರಶ್ನೆಗೆ ಉತ್ತರಿಸಿದ್ದಾರೆ.

ಹಿಂದೂ ಧಾರ್ಮಿಕ ಕಾರ್ಯಕ್ರಮಗಳ ಸ್ಥಳದಲ್ಲಿ ಮುಸ್ಲಿಮರಿಗೆ ವ್ಯಾಪಾರಕ್ಕೆ ಅವಕಾಶ ನೀಡಬಾರದು ಎಂಬ ಅಭಿಯಾನದ ಕುರಿತು ಪ್ರತಿಕ್ರಿಸಿದ ಅವರು, ಯಾವುದೇ ಧರ್ಮವಾಗಿರಲಿ ಅವರು ಕೋಮುವಾದ ಮಾಡಕೂಡದು. ಎಲ್ಲರನ್ನೂ ಸಮಾನವಾಗಿ ಕಾಣಬೇಕು ಎಂದರು.

## ವಾರ ಭವಿಷ್ಯ

**ದಿನಾಂಕ : 20.03.2022 ರಿಂದ 26.03.2022**

**– ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**

ಕೌಟುಂಬಿಕ ಸಮಸ್ಯೆಗಳನ್ನು ಬಹುಕಾಲದವರೆಗೆ ಎಳೆಯದೇ ಸಾಧ್ಯವಾದಷ್ಟು ಬೇಗನೆ ಬಗೆಹರಿಸಿಕೊಳ್ಳಲು ಪ್ರಯತ್ನಿಸಿ. ಇಲ್ಲವಾದಲ್ಲಿ ಮಾನಸಿಕ ನೆಮ್ಮದಿ ಹಾಳಾದೀತು.ಬಹುಕಾಲದಿಂದ ಕಾಡುತ್ತಿದ್ದ ಅನಾರೋಗ್ಯ ಸುಧಾರಿಸಲಿದೆ. ಲೆಕ್ಕಾಧಿಕಾರಿಗಳು ಕೊಡುವ ತಪ್ಪು ಅಥವಾ ವ್ಯತಿರಿಕ್ತ ಸಲಹೆಗಳಿಂದ ನಷ್ಟ ಅನುಭವಿಸಬೇಕಾದೀತು. ನೀವು ಲೇವಾದೇವಿ ವ್ಯವಹಾರಸ್ಥರಾಗಿದ್ದಲ್ಲಿ, ಸಾಕಷ್ಟು ಎಚ್ಚರದಿಂದಿರುವುದು ಮೇಲು. ಇಲ್ಲವಾದಲ್ಲಿ, ಕಾನೂನು ಕಟ್ಟಳೆಗಳ ಸುಳಿಗೆ ಸಿಲುಕಬಹುದು. ಬಟ್ಟೆ ವ್ಯಾಪಾರಿಗಳಿಗೆ ಹೆಚ್ಚಿನ ಲಾಭ. ಹಣಕಾಸು ಸಂಸ್ಥೆಗಳಿಂದ ನೆರವು ದೊರೆಯಬಹುದಾದರೂ ಅದು ದುರುಪಯೋಗವಾಗುವ ಸಂಭವ. ಆರ್ಥಿಕ ಪರಿಸ್ಥಿತಿ ಕ್ರಮೇಣ ಸುಧಾರಿಸಲಿದೆ. ಭಾನು, ಸೋಮ, ಮಂಗಳ ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ಗೌರವ ಧನ ಪಡೆಯುವುದಕ್ಕೋಸ್ಕರ ಬಹಳ ದಿನಗಳಿಂದ ಪರದಾಡುತ್ತಿದ್ದ ಕಲಾವಿದರಿಗೆ ಹೊಸ ವ್ಯಕ್ತಿಯೊಬ್ಬರ ಪರಿಚಯದಿಂದ ಮತ್ತು ಅವರ ಪ್ರಭಾವದಿಂದ ಸರ್ಕಾರದಿಂದ ಬರಬೇಕಾಗಿರುವ ಗೌರವ ಧನ ದೊರೆಯಲಿದೆ. ಅನಿರೀಕ್ಷಿತ ಮೂಲಗಳಿಂದ ಧನ ಸಹಾಯವು ದೊರೆತು, ನಿಂತು ಹೋಗಿದ್ದ ಹೊಸಮನೆ ಕೆಲಸವು ಭರದಿಂದ ಮುಂದೆ ಸಾಗಲಿದೆ. ಖಾಸಗಿ ಕಂಪನಿ ನೌಕರರು ಮಾಡುವ ಕೆಲಸದಲ್ಲಿ ಶ್ರದ್ಧೆ ತೋರದೇ ಹೋದಲ್ಲಿ ತುಂಬಾ ತೊಂದರೆ ಅನುಭವಿಸಬೇಕಾದೀತು. ಹಿರಿಯರಿಗೆ ಕಣ್ಣಿನ ತೊಂದರೆ ಕಾಣಿಸಿಕೊಳ್ಳಲಿದೆ. ಹಣ್ಣು, ತರಕಾರಿ, ಹೂವು, ಹೈನುಗಾರಿಕೆ ಮುಂತಾದವುಗಳಲ್ಲಿ, ವಹಿವಾಟು ಜೋರಾಗಿಯೇ ನಡೆಯಲಿದೆ. ಆರ್ಥಿಕ ಪರಿಸ್ಥಿತಿ ಸಾಧಾರಣ. ಸೋಮ, ಶುಕ್ರ, ಶನಿ ಶುಭ ದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಙ, ಚ.ಕೆ.ಕೋ.ಹ.)**

ನೀವು ಸಾಮಾಜಿಕ ಸೇವೆಯಲ್ಲಿ ಹೆಚ್ಚು ಹೆಚ್ಚು ತೊಡಗಿಕೊಂಡಷ್ಟು ಕಾಲ ವೈಯಕ್ತಿಕ ಬದುಕಿನಲ್ಲಿ ನೆಮ್ಮದಿ ಕಳೆದುಕೊಳ್ಳುವಿರಿ. ಈ ವಿಷಯವನ್ನು ತುಸು ಗಂಭೀರವಾಗಿ ಪರಿಗಣಿಸುವುದು ಮೇಲು. ಆಸ್ತಿಗೆ ಸಂಬಂಧಿಸಿದ ವಿಚಾರದಲ್ಲಿ ಸನ್ನಿವೇಶವು ನಿಮಗೆ ಅನುಕೂಲಕರವಾಗಲಿದೆ. ನೆರೆಹೊರೆಯವರೊಂದಿಗೆ ಯಾವುದೇ ಕಾರಣಕ್ಕೂ ವಿರಸ ಬೇಡ. ನೀರಾವರಿ ವಿಭಾಗದಲ್ಲಿ ಕೆಲಸ ಮಾಡುವವರಿಗೆ ಹೆಚ್ಚಿನ ಅವಕಾಶಗಳು ತಾವಾಗಿಯೇ ಅರಸಿಕೊಂಡು ಬರಲಿದ್ದು, ಅವರ ಆದಾಯ ಹೆಚ್ಚಲಿದೆ. ಸರ್ಕಾರಿ ಉದ್ಯೋಗಿಗಳಿಗೆ ವೇತನದಲ್ಲಿ ಹೆಚ್ಚಳವಾಗಲಿದೆ. ಮಕ್ಕಳ ವಿದ್ಯಾಭ್ಯಾಸದ ವಿಷಯದಲ್ಲಿ ಉದಾಸೀನತೆ ಬೇಡ. ಅಪರಿಚಿತ ಮಹಿಳೆಯರಿಂದ ಮೋಸಹೋಗುವ ಪ್ರಸಂಗ ಬರಬಹುದು. ಗುರುಗಳ ಸೇವೆ ಮಾಡಿ. ಮಂಗಳ, ಬುಧ, ಗುರು ಶುಭದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೂ.ಡ.ಡಿ.ಡು.ಡೆ.ಡೋ)**

ಮನೆಕಟ್ಟುವ ವಿಚಾರದಲ್ಲಿ ಆಲೋಚಿಸುವ ಪ್ರಸಂಗವಿಲ್ಲ, ಸ್ನೇಹಿತರಿಗೆ ತುರ್ತು ಸಂದರ್ಭದಲ್ಲಿ, ಶಕ್ತಿಮೀರಿ ನೆರವಾಗುವಿರಿ. ಸೋದರನಿಗೆ ಕಂಕಣಬಲ ಕೂಡಿ ಬರಲಿದೆ. ಪದವೀಧರಳಾದ ಮಗಳಿಗೆ ಸಾಧಾರಣ ವೇತನದ ನೌಕರಿ ದೊರೆಯಲಿದೆ. ವಿದೇಶದಲ್ಲಿರುವ ಮಗನಿಂದ ಹೆಚ್ಚಿನ ಧನ ಸಹಾಯ ಹರಿದುಬರಲಿವೆ. ಹಿರಿಯರ ಅನುಭವಯುಕ್ತ ಮಾತುಗಳು ಮುಂದೆ ನಿಮಗೆ ಆಗಬಹುದಾದ ನಷ್ಟ ತಪ್ಪಿಸಲಿದೆ.ಯಾವುದೇ ಪ್ರಸಂಗ ಬಂದರೂ ಬಂಧುಗಳೊಂದಿಗೆ ನಿಷ್ಠೂರ ಬೇಡ. ಆದಾಯದ ಮೂಲದಲ್ಲಿ ಹೆಚ್ಚಳ ಕಂಡುಬರಲಿದೆ. ಮಹಿಳೆಯರಿಗೆ ಉತ್ತಮ ದಿನಗಳು. ಸೋಮ, ಗುರು, ಶುಕ್ರ ಶುಭ ದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ಬಂಧುಗಳಲ್ಲಿ ಮೂಡಿರುವ ವೈಯಕ್ತಿಕ ಭಿನ್ನಾಭಿಪ್ರಾಯಗಳು ನಿಮ್ಮ ಒಂದು ಮಾತಿನಿಂದಾಗಿ ಸುಖಾಂತ್ಯವಾಗಿ ಬಗೆಹರಿಯಲಿವೆ. ಮಕ್ಕಳ ವಿದ್ಯಾಭ್ಯಾಸದ ಬಗ್ಗೆಯಿದ್ದ ಚಿಂತೆ ದೂರವಾಗಲಿದೆ. ವಿದ್ಯುನ್ಮಾನ ತಂತ್ರಜ್ಞರಿಗೆ ಹೆಚ್ಚಿನ ಬೇಡಿಕೆ ಬರಲಿದೆ. ಕೆಲವು ವಿಚಾರಗಳನ್ನು ಸರಿಯಾಗಿ ತಿಳಿಯದೆ ನಿಮ್ಮ ನಿರ್ಧಾರ ತಿಳಿಸಬೇಡಿ. ಅನಾವಶ್ಯಕ ಸಾಲ ಒಳ್ಳೆದಲ್ಲ. ಆರೋಗ್ಯ ಕ್ಷೇತ್ರದಲ್ಲಿ, ಕೆಲಸ ಮಾಡುವವರಿಗೆ, ಆದಾಯದಲ್ಲಿ ಹೆಚ್ಚಳ ಕಂಡುಬರಲಿದೆ. ಭೂ ವ್ಯವಹಾರ ಮಾಡುವವರಿಗೆ ಉತ್ತಮ ಕಮೀಷನ್ ದೊರೆಯಲಿದೆ. ತೈಲ ಸಗಟು ವ್ಯಾಪಾರಿಗಳಿಗೆ ಉತ್ತಮ ವಹಿವಾಟು ನಡೆದು ಲಾಭ ಹೆಚ್ಚಲಿದೆ. ರಾಜಕಾರಣಿಗಳಿಗೆ ವರಿಷ್ಠರ ಬೆಂಬಲ ಸಿಗಲಿದೆ. ಭಾನು, ಸೋಮ, ಗುರು ಶುಭ ದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ಅಧ್ಯಯನದಲ್ಲಿ ಅನೇಕ ಅಡೆತಡೆ ಎದುರಿಸುತ್ತಿದ್ದ ವಿದ್ಯಾರ್ಥಿಗಳಿಗೆ ಈ ವಾರ ಉತ್ತಮವಾಗಲಿದೆ. ಸಮಾಜದಿಂದ ಸಾಕಷ್ಟು ಹಣಕಾಸಿನ ನೆರವು ದೊರೆಯಲಿದ್ದು, ಮುಂದಿನ ಭವಿಷ್ಯಕ್ಕೆ ನಾಂದಿಯಾಗಲಿದೆ. ಮಹಿಳಾ ಕಲಾವಿದರಿಗೆ ಉತ್ತಮ ವೇದಿಕೆ ದೊರೆತು ಪ್ರತಿಭಾ ಪ್ರದರ್ಶನ ಅನಾವರಣವಾಗಲಿದೆ. ಸರ್ಕಾರಿ ನೌಕರರು ತಮ್ಮ ಕರ್ತವ್ಯದಲ್ಲಿ ಎಚ್ಚರದಿಂದಿರದೇ ಹೋದಲ್ಲಿ ಭ್ರಷ್ಟಾಚಾರದ ಪ್ರಕರಣಗಳಲ್ಲಿ ಆರೋಪ ಎದುರಿಸಬೇಕಾಗಬಹುದು. ಕೈಗಾರಿಕೋದ್ಯಮಿಗಳಿಗೆ ಸರ್ಕಾರದಿಂದ ಬರಬೇಕಾಗಿರುವ ಸಕಲ ಸೌಲಭ್ಯಗಳು ಇಷ್ಟರಲ್ಲೇ ದೊರೆಯಲಿವೆ. ಆದಾಯದ ಮೂಲದಲ್ಲಿ ಹೆಚ್ಚಳ. ಗುರು ಸೇವೆಯಿಂದ ಉತ್ತಮ ಫಲ ಪ್ರಾಪ್ತಿ. ಭಾನು, ಮಂಗಳ, ಬುಧ ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ನಿರುದ್ಯೋಗಿ ಪದವೀಧರರಿಗೆ ಅವಕಾಶಗಳ ಹೆಬ್ಬಾಗಿಲೇ ತೆರೆಯಲಿದ್ದು, ಜೀವನದ ಅನೇಕ ಸಮಸ್ಯೆಗಳು ಬಗೆಹರಿಯಲಿವೆ. ಆದರೆ, ನೌಕರಿ ಆಯ್ಕೆಯಲ್ಲಿ ತುಸು ತಾಳ್ಮೆಯಿಂದ ವರ್ತಿಸುವುದು ಮೇಲು. ಇಲ್ಲವಾದಲ್ಲಿ ಎಲ್ಲವೂ ಕನಸಿನ ಗಂಟಾದೀತು. ಹಣಕಾಸಿನ ಹರಿವು ಸಾಧಾರಣ. ಖರ್ಚುವೆಚ್ಚಗಳ ಮೇಲೆ ಹಿಡಿತ ಸಾಧಿಸದೇ ವಿಧಿಯಿಲ್ಲ. ವ್ಯಾಪಾರ, ವ್ಯವಹಾರಗಳಲ್ಲಿ ತುಸು ಮೈಮರೆತರೂ ಕಾನೂನಿನ ಸಮಸ್ಯೆಗಳನ್ನು ಎದುರಿಸಬೇಕಾದೀತು. ಮಕ್ಕಳ ನಡಾವಳಿಯಲ್ಲಿನ ವ್ಯತ್ಯಾಸ ಮನಸ್ಸಿಗೆ ನೋವುಂಟು ಮಾಡಬಹುದು. ಸಮಸ್ಯೆಯಿದ್ದಲ್ಲಿ, ಬಹಳ ನಾಜೂಕಿನಿಂದ ಬಗೆಹರಿಸಲು ಯತ್ನಿಸಿ. ಮಹಿಳಾ ರಾಜಕಾರಣಿಗಳಿಗೆ ವರಿಷ್ಠರ ಸಂಪೂರ್ಣ ಬೆಂಬಲ ದೊರೆಯಲಿದೆ. ಗುರು, ಶುಕ್ರ, ಶನಿ ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯಿ.ಯು.)**

ನೀವು ಲೇವಾದೇವಿ ವ್ಯವಹಾರ ಮಾಡುವವರಾಗಿದ್ದಲ್ಲಿ ಹೆಚ್ಚಿನ ಬಂಡವಾಳ ಹೂಡದೇ ಇರುವುದು ಲೇಸು. ಇಲ್ಲವಾದಾಲ್ಲಿ ಅನೇಕ ಕಾನೂನಾತ್ಮಕ ಸಮಸ್ಯೆಗಳನ್ನು ಎದುರಿಸಬೇಕಾದೀತು. ಕೃಷಿಕರಿಗೆ ಸರ್ಕಾರದಿಂದ ದೊರೆಯಬೇಕಾಗಿರುವ ನೆರವು ಕೃಷಿ ಉಪಕರಣಗಳ ರೂಪದಲ್ಲಿ ದೊರೆಯಲಿದೆ. ಉದ್ಯೋಗ ಕ್ಷೇತ್ರದಲ್ಲಿರುವವರಿಗೆ ನಿರೀಕ್ಷಿತ ಶುಭ ಸಮಾಚಾರ ಕೇಳಿಬರಲಿದೆ. ಸಾಂಪ್ರದಾಯಿಕ ಕೃಷಿಯಿಂದ ಹೆಚ್ಚಿನ ಲಾಭವಿಲ್ಲದಿದ್ದರೂ, ನಷ್ಟವಂತೂ ಖಂಡಿತಾಯಿಲ್ಲ. ಮತ್ತೊಬ್ಬರ ವೈಯಕ್ತಿಕ ವಿಚಾರದಲ್ಲಿ ಮಧ್ಯಸ್ಥರಾಗಿ ಹೋದಲ್ಲಿ ನೀವೇ ತೊಂದರೆಗೆ ಸಿಲುಕುವಿರಿ. ಗೆಳೆಯರ ಮನೆಯಲ್ಲಿ ನಡೆಯಲಿರುವ ಶುಭ ಸಮಾರಂಭದಲ್ಲಿ ಪರಿವಾರ ಸಮೇತ ಹೋಗಿ ಭಾಗವಹಿಸುವಿರಿ. ಗುರು, ಶುಕ್ರ, ಶನಿ ಶುಭ ದಿನಗಳು.

**ಧನಸ್ಸು (ಮೂಲ, ಪೂರ್ವಾಷಾಡ, ಉತ್ತರಾಷಾಡ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**

ನೀವೇ ಅತ್ಯುತ್ಸಾಹದಿಂದ ಮನೆಯಲ್ಲಿ ಏರ್ಪಡಿಸಿದ್ದ ಶುಭ ಕಾರ್ಯಗಳಿಗೆ ಕಾರಣಾಂತರದಿಂದ ನೀವೇ ಭಾಗವಹಿಸದೇ ಹೋಗಬೇಕಾದೀತು. ಇದರಿಂದಾಗಿ ಬಂಧುಗಳಲ್ಲಿ ನಿಮ್ಮ ಬಗ್ಗೆ ಇಲ್ಲಸಲ್ಲದ ಸಂಶಯ ಮೂಡಬಹುದು. ಸಮಾಜ ಸೇವೆಯಲ್ಲಿ ತೊಡಗಿಕೊಂಡವರಿಗೆ ವೈಯಕ್ತಿಕ ನಿಂದನೆ ಸಹಜ. ಮುಂದೆ ಅದೇ ಜನ ಸನ್ಮಾನ ಮಾಡುವರು. ಅರ್ಧಕ್ಕೇ ನಿಂತಿದ್ದ ಕಟ್ಟಡದ ಕೆಲಸಗಳು ದೊರೆಯಲಿರುವ ಆರ್ಥಿಕ ನೆರವಿನಿಂದಾಗಿ ಸಂಪೂರ್ಣಗೊಳ್ಳಲಿದೆ. ಕೆಲವು ವಿಷಯಗಳಲ್ಲಿ ಹಿರಿಯರ ಸಲಹೆಯಂತೆ ನಡೆದುಕೊಂಡಲ್ಲಿ ನಿಮ್ಮ ಅನೇಕ ಸಮಸ್ಯೆಗಳಿಗೆ ಪರಿಹಾರ ಸಿಗಲಿದೆ. ಹಣಕಾಸಿನ ಹರಿವು ಉತ್ತಮ. ಚಿಂತೆ ಬೇಡ. ಭಾನು, ಬುಧ, ಗುರು ಶುಭ ದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ಬಹು ಪ್ರಯತ್ನದಿಂದ ಸಾಧ್ಯವಾಗಿದ್ದ ಕೆಲಸಗಳಿಗೆ ಇದ್ದ ನೂರೆಂಟು ವಿಘ್ನಗಳು ಇನ್ನು ಮುಂದೆ ಪರಿಹಾರವಾಗಲಿದೆ. ಆತ್ಮವಿಶ್ವಾಸದಿಂದ ಮುನ್ನಡೆದಲ್ಲಿ ಯಶಸ್ಸು ನಿಮ್ಮದಾಗಲಿದೆ. ಜಡ್ಡುಗಟ್ಟಿ ಹೋಗಿದ್ದ ವ್ಯವಹಾರದಲ್ಲಿ, ಹೊಸ ಚೈತನ್ಯ ಮೂಡಲಿದೆ. ನ್ಯಾಯವಾದಿಗಳಿಗೆ ನ್ಯಾಯಾಲಯ ದಲ್ಲಿ ಅವರ ವಾದಕ್ಕೆ ಸಂಪೂರ್ಣ ಜಯ ದೊರೆಯಲಿದೆ. ಖಾಸಗಿ ಕಂಪನಿ ನೌಕರರಿಗೆ ಅವರ ವರ ಪರಿಶ್ರಮಕ್ಕೆ ತಕ್ಕಂತೆ ವೇತನ ಹೆಚ್ಚಳವಾಗಲಿದೆ. ಚಿಕ್ಕಮಕ್ಕಳ ಆರೋಗ್ಯದ ವಿಷಯದಲ್ಲಿ ಎಚ್ಚರವಿರಲಿ. ಅಮೂಲ್ಯ ವಸ್ತುಗಳ ಬಗ್ಗೆ ಜಾಗ್ರತೆ ವಹಿಸಿರಿ. ಮಂಗಳ, ಬುಧ, ಶನಿ ಶುಭ ದಿನಗಳು.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ಮನೆಯಲ್ಲಿ ಎಲ್ಲರನ್ನೂ ಗೌರವದಿಂದ ಕಾಣುವ ಈ ನಿಮ್ಮ ಉತ್ತಮ ಗುಣದಿಂದ ಎಲ್ಲರ ಪ್ರೀತಿಗೆ ಪಾತ್ರರಾಗುವಿರಿ. ಆಸ್ತಿ ವಿಚಾರದಲ್ಲಿ ಆತುರಬೇಡ. ಮನರಂಜನಾ ಕಲಾವಿದರಿಗೆ ಹೆಚ್ಚಿನ ಪ್ರದರ್ಶನಾವಕಾಶಗಳು ದೊರೆಯಲಿದ್ದು ಕೈತುಂಬಾ ಸಂಪಾದನೆಯಾಗಲಿದೆ. ಒಂದು ಹೊಸ ಯೋಜನೆಯಲ್ಲಿ ಬಂಡವಾಳ ಹೂಡುವಂತೆ ಮಿತ್ರರಿಂದ ಹಾಗು ಹಿತೈಷಿಗಳಿಂದ ಸಲಹೆ ಬರಲಿದೆ. ಸರಿಯಾಗಿ ತಿಳಿಯದೆ ಮುಂದುವರೆಯಬೇಡಿ. ಸಿದ್ಧ ಉಡುಪಗಳ ತಯಾರಕರಿಗೆ ಸರಕುಗಳನ್ನು ಪೂರೈಸಲಾರದಷ್ಟು ಹೆಚ್ಚಿನ ಬೇಡಿಕೆ ಬರಲಿದೆ. ಗುರು, ಶುಕ್ರ, ಶನಿ ಶುಭ ದಿನಗಳು.

**ಮೀನ (ಪೂರ್ವಾಭಾದ್ರ 4, ಉ2ತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**


ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುವ ಮಹಿಳೆಯರು ತಮ್ಮ ಸಹೋದ್ಯೋಗಿಗಳೊಂದಿಗೆ ಸೌಹಾರ್ದತೆಯಿಂದ ನಡೆದುಕೊಂಡು ಹೋಗದಿದ್ದಲ್ಲಿ ಮುಂದೆ ಅವರಿಂದಲೇ ಭಾರೀ ತೊಂದರೆ ಅನುಭವಿಸಬೇಕಾದೀತು. ಸರ್ಕಾರದಿಂದಾಗ ಬೇಕಾಗಿರುವ ಕೆಲಸಗಳು ಮೇಲಾಧಿಕಾರಿಗಳ ದುರ್ನಡತೆಯಿಂದ ಮಂದಗತಿಯಲ್ಲಿ ಸಾಗಲಿವೆ. ಮಕ್ಕಳು ಮಾಡಬಹುದಾದ ಕೆಲವು ತಪ್ಪುಗಳಿಂದ ನೆರೆಹೊರೆಯವರೊಂದಿಗೆ ದ್ವೇಷ ಕಟ್ಟಿಕೊಳ್ಳಬೇಕಾಗಬಹುದು. ಸರ್ಕಾರಿ ನೌಕರರಿಗೆ ವೇತನದಲ್ಲಿ ಹೆಚ್ಚಳ ಕಂಡು ಬಂದರೂ ಅವರ ಆರ್ಥಿಕ ಸಮಸ್ಯೆಗಳು ಬಗೆಹರಿಯದೇ ಹೋಗಬಹುದು. ಅನಿರಿಕ್ಷಿತವಾಗಿ ವರ್ಗಾವಣೆಯಾದಲ್ಲಿ ಆಶ್ಚರ್ಯವಿಲ್ಲ. ಗುರು ಜಪ ಮಾಡಿರಿ. ಭಾನು, ಗುರು, ಶುಕ್ರ ಶುಭ ದಿನಗಳು.

**ವಿಶೇಷ ದಿನಗಳು : 20.03.2022ನೇ ಭಾನುವಾರ ಶ್ರೀ ಸತ್ಯಬೋಧ ಸ್ವಾಮಿ ಆರಾಧನೆ (ಸವಣೂರು, ಹಾವೇರಿ ಜಿಲ್ಲೆ). 21.03.2022ನೇ ಸೋಮವಾರ ಶ್ರೀ ವಾದಿರಾಜ ಸ್ವಾಮಿಗಳ ಆರಾಧನೆ (ಶ್ರೀಕ್ಷೇತ್ರ ಸೋಂದಾ), ಸಂಕಷ್ಟ ಚತುರ್ಥಿ, ಚಂದ್ರೋದಯ ರಾತ್ರಿ 9.37ಕ್ಕೆ. 22.03.2022ರ ಮಂಗಳವಾರ ಶ್ರೀ ವ್ಯಾಸರಾಯರ ಆರಾಧನೆ (ಶ್ರೀಕೇಷ್ತ್ರ ನವವೃಂದಾವನ, ಆನೆಗೊಂದಿ)**

# ಇಂದು ಸಂತ ತುಕಾರಾಮ ಮಹಾರಾಜರ ವೈಕುಂಠ

ಸಂತ ತುಕಾರಾಮರು ದೇಶ ಕಂಡ ಮಹಾನ್ ಸಂತಮಣಿಗಳು, ದೊಡ್ಡ ಹೆಸರು ಮಾಡಿದ ಮಹಾವಿಷ್ಣುವಿನ ಅವತಾರಿಗಳು. ಜನರಿಗೆ ಭಕ್ತಿ ಮಾರ್ಗದ ದಾರಿ ತೋರಿದ ಅವತಾರ ಪುರುಷರು, ಅನುಪಮ ಕವಿಗಳು.





**ಶಿವಾಜಿ ಮಹಾರಾಜರನ್ನು ಸೆರೆ ಹಿಡಿಯಲು ಬಂದಾಗ ಭಗವಂತ ಮಾಡಿದ ಚಮತ್ಕಾರವೇನು ? ಸಂತ ತುಕಾರಾಮರ ಕೀರ್ತನೆಯಲ್ಲಿ ಮಾಡಿದ ಕಟ್ಟಪ್ಪಣೆ ಏನು ?**

ಮಹಾರಾಷ್ಟ್ರ ರಾಜ್ಯದ ಪುಣೆಯ ಭಕ್ತ ಸಾವುಕಾರನ ವಾಡೆಯಲ್ಲಿ ತುಕಾರಾಮರ ಕೀರ್ತನೆ ನಡೆದಿತ್ತು. ಶಿವಾಜಿ ಮಹಾರಾಜರು ತುಕಾರಾಮರ ದರ್ಶನಕ್ಕೆ ಬಹಳ ಗೌಪ್ಯವಾಗಿ ಬಂದು ಕುಳಿತುಕೊಂಡರು. ಆ ಕಾಲದಲ್ಲಿ ಮುಸಲ್ಮಾನ ರಾಜರು ಪ್ರಬಲರಾಗಿದ್ದರಿಂದ ಶಿವಾಜಿಯವರು ಬಹಳ ಗೌಪ್ಯವಾಗಿ ಸಂಚರಿಸುತ್ತಿದ್ದರು. ಶಿವಾಜಿಯು ಗುರುದರ್ಶನದ ನೀತಿಗನುಸಾರವಾಗಿ 'ಬೆಳ್ಳಿ ಪಾತ್ರೆಯಲ್ಲಿ ಹೊನ್ನುಗಳನ್ನು' ನೀಡಲು ಹೋದಾಗ ತುಕಾರಾಮರು ಅವುಗಳನ್ನು ನಿರಾಕರಿಸಿ, ಭಗವಂತನ ನಾಮಸ್ಮರಣೆಯನ್ನು ಮಾಡಲು ತಿಳಿಸಿದರು. ಅಂದು ಏಕಾದಶಿ ಇದ್ದುದರಿಂದ, ಬಹಳಷ್ಟು ಜನರು ಸೇರಿದ್ದರಿಂದ, ಕೀರ್ತನೆ ರಂಗೇರಿತ್ತು. ಶಿವಾಜಿ ಮಹಾರಾಜರು ಕೀರ್ತನೆ ಕೇಳಲಿಕ್ಕೆ ಬಂದಿದ್ದಾರೆ ಎಂಬ ಸುಳಿವು ಸಿಕ್ಕಿದ್ದರಿಂದ 'ಚಾಕಣಿ' ಎಂಬ ಊರಿನಿಂದ ಸಾವಿರಾರು ಪಠಾಣ ಸಿಪಾಯಿಗಳು ವಾಡೆಗೆ ಮುತ್ತಿಗೆ ಹಾಕಿ ಶಿವಾಜಿಯನ್ನು ಬಂಧಿಸಲು ಹುಡುಕಹತ್ತಿದ್ದರು. ಸಭೆಯಲ್ಲಿ ಗುಜು ಗುಜು ಪ್ರಾರಂಭವಾಯಿತು. ಕೊನೆಗೆ ತುಕಾರಾಮರಿಗೆ ವಿಷಯ ತಿಳಿಯಿತು. ಆಗ 'ತುಕಾರಾಮರು ಕೀರ್ತನೆ ನಡೆಯುವಾಗ ಯಾರೂ ಎದ್ದು ಹೋಗಬೇಡಿ, ಇದು ಆಜ್ಞೆ' ಎಂದರು. ಶಿವಾಜಿ ಮಹಾರಾಜರು ಮತ್ತು ಭಕ್ತ ಜನಗಳು ತುಕಾರಾಮರಲ್ಲಿ ಭಕ್ತಿ, ವಿಶ್ವಾಸವಿಟ್ಟು ಕೀರ್ತನೆಯನ್ನು ಕೇಳುತ್ತಾ ಕುಳಿತರು. ಆಗ ತುಕಾರಾಮರು ಪಾಂಡುರಂಗನಿಗೆ ಯಾರಿಗೂ ತೊಂದರೆಯಾಗದಂತೆ ನೋಡಿಕೋ ತಂದೆ ಎಂದು ಬೇಡಿಕೊಂಡರು. ಆಗ ಶ್ರೀ ಪಾಂಡುರಂಗನು ತುಕಾರಾಮರಿಗೆ ಮಾತ್ರ ಕಾಣಿಸಿಕೊಂಡು ನೀನು ಕೀರ್ತನೆಯನ್ನು ಮುಂದುವರೆಸು, ನಾನು ಈ ವಿಘ್ನವನ್ನು ನಿವಾರಿಸುತ್ತೇನೆ ಎಂದು ಅಭಯ ನೀಡಿದನು.

ಎಲ್ಲರೂ ನೋಡು ನೋಡುತ್ತಿದ್ದಂತೆ ಶ್ರೀ ಪಾಂಡುರಂಗನು ಶಿವಾಜಿ ಮಹಾರಾಜರ ಕುದುರೆ ಮೇಲೆ ಹತ್ತಿ ಹೊರಟನು. ಎಲ್ಲಾ ಪಠಾಣರು ಅವನನ್ನು ಬೆನ್ನಟ್ಟಿದರು ಶಿವಾಜಿ ವೇಷದಲ್ಲಿದ್ದ ಶ್ರೀ ಪಾಂಡುರಂಗ ದಟ್ಟ ಅರಣ್ಯದ ಮಧ್ಯೆ ಕಾಣೆಯಾದನು. ರಾತ್ರಿಯ ಸಮಯವಾದ್ದರಿಂದ ಅರಣ್ಯದಲ್ಲಿ ಕಲ್ಲು ಮುಳ್ಳುಗಳಿಂದ ಬಟ್ಟೆಗಳೆಲ್ಲಾ ಹರಿದು ಕುದುರೆಗಳು ಮುಂದೆ ಹೋಗದಾದವು. ಪಠಾಣರು ಅರಣ್ಯದಲ್ಲಿ ದಾರಿ ಕಾಣದೆ ಅಲ್ಲೇ ಇರುವಂತಾಯಿತು. ಈ ಕಡೆಯಲ್ಲಿ ತುಕಾರಾಮರ ಕೀರ್ತನೆ ಸರಾಗವಾಗಿ ನಡೆದಿತ್ತು. ಈ ಸಮಾಚಾರ ತಿಳಿದಾಗ ಭಕ್ತ ವೃಂದಕ್ಕೆ ಆಶ್ಚರ್ಯ ಮತ್ತು ಆನಂದದಿಂದಾಗಿ ಪಂಡರೀನಾಥ ನಮ್ಮನ್ನು ಕಾಪಾಡಿದ ಎಂದರು. ತುಕಾರಾಮರು 'ಶಿವಾಜಿಯನ್ನು ಹರಸಿ ಆಶೀರ್ವದಿಸಿದರು'. ಅಲ್ಲಿದ್ದ ಭಕ್ತ ವೃಂದ ಶಿವಾಜಿ ಮಹಾರಾಜರಿಗೆ ತುಕಾರಾಮರಿಗೆ ಜಯ, ಜಯಕಾರ ಮಾಡಿದರು. ತುಕಾರಾಮರ ಜೀವನದಲ್ಲಿ ಸಾವಿರಾರು ಇಂತಹ ಚಮತ್ಕಾರಗಳನ್ನು ಶ್ರೀ ಪಾಂಡುರಂಗ ನಡೆಸಿಕೊಟ್ಟಿದ್ದಾನೆ.

ಇಂದು ತುಕಾರಾಮರು ಸದೇಹ ಸಮೇತರಾಗಿ ವೈಕುಂಠಕ್ಕೆ ಹೋದ ದಿನ. ಇದನ್ನು ಮರಾಠಿ ಭಾಷೆಯಲ್ಲಿ 'ತುಕಾರಾಮ ಬೀಜ' ಎಂದು ಕರೆಯುತ್ತಾರೆ. ತುಕಾರಾಮರು ಶಾಲಿವಾಹನ ಶಕೆ 1571 ವಿರೋಧಿ ನಾಮ ಸಂವತ್ಸರ ಉತ್ತರಾಯಣ ಫಾಲ್ಗುಣವಿದ್ದು, ದ್ವಿತೀಯಾ ಸೋಮವಾರ ಬೆಳಿಗ್ಗೆ 9 ಗಂಟೆಗೆ ಕೀರ್ತನೆಯನ್ನು ಮಾಡುತ್ತಿರುವಾಗ ಶ್ರೀ ಪಾಂಡುರಂಗ ಕಳುಹಿಸಿದ 'ಪುಷ್ಪಕ ವಿಮಾನದಲ್ಲಿ' ವೈಕುಂಠಕ್ಕೆ ತೆರಳುತ್ತಾರೆ. ಅಪಾರ ಭಕ್ತ ವೃಂದವು ಆಗ ಕಣ್ಣೀರ ಕಡಲಲ್ಲಿ ಮುಳುಗುತ್ತದೆ.

ಇಂದು ಅವರ ಜನ್ಮಸ್ಥಳ 'ದೇವೂ ಎಂಬ ಊರಿನಲ್ಲಿ' ಲಕ್ಷಾಂತರ ಭಕ್ತರು ಸೇರಿ ತುಕಾರಾಮರಿಗೆ ತಮ್ಮ ನಮನಗಳನ್ನು ಸಲ್ಲಿಸುತ್ತಾರೆ. ಈ ಕಲಿಯುಗದಲ್ಲಿ ಸದೇಹ ಸಮೇತ ವೈಕುಂಠಕ್ಕೆ ಹೋದವರಿಲ್ಲ. ಇದು ಪ್ರಪಂಚದ ''ಏಳು ಅದ್ಭುತಗಳಲ್ಲಿ ಒಂದು'' ಎಂದು ಹೇಳಿದರೆ ತಪ್ಪಾಗಲಾರದು. ದ್ವಾಪರ ಯುಗದಲ್ಲಿ ಪಾಂಡವರು ಸ್ವರ್ಗಾರೋಹಣ ಮಾಡಿದಾಗ ಹಿಮಾಲಯದ ದಾರಿಯಲ್ಲಿ ಚಳಿಯನ್ನು ತಾಳಲಾರದೆ ಒಬ್ಬೊಬ್ಬರಾಗಿ ಪ್ರಾಣ ತ್ಯಾಗ ಮಾಡಿ 'ಧರ್ಮನಂದನ' ಮಾತ್ರ ಸ್ವರ್ಗ ಪ್ರವೇಶ ಮಾಡುತ್ತಾನೆ. ಈ ಕಲಿಯುಗದಲ್ಲಿ ತುಕಾರಾಮರು ಶ್ರೀ ಪಾಂಡುರಂಗ ಕಳಿಸಿದ ಪುಷ್ಪಕ ವಿಮಾನದಲ್ಲಿ ವೈಕುಂಠಕ್ಕೆ ಹೋಗುತ್ತಾರೆ. ಎಂದರೆ ಇದು ಅವರ 'ಭಕ್ತಿಯ ಪರಕಾಷ್ಟೆ' ಎಂದು ತಿಳಿಯುತ್ತದೆ. ಯಾರು ಸಂಸಾರ ಸಮೇತ ಪಂಡರಿರಾಯನನ್ನುದರ್ಶನಮಾಡುತ್ತಾರೋ ಅವರು ಮೋಕ್ಷದ ಪದವಿಯನ್ನು ಪಡೆಯುತ್ತಾರೆ ಎಂದು ಹೇಳಿದ್ದಾರೆ. ಆದ್ದರಿಂದ ನಾವೂ ಸಹ ಒಮ್ಮೆ ಪಂಡರಿರಾಯನ ದರ್ಶನ ಮಾಡಬಹುದಲ್ಲವೇ ? ಪ್ರಯತ್ನ ನಮ್ಮದು ಇದು ಸಂತ ತುಕಾರಾಮರಿಗೆ ಅರ್ಪಿಸುವ ಭಕ್ತಿಯ ಪುಷ್ಪಮಾಲೆ.



**- ಬಾಗೂರು ಜಿ. ಪರಪ್ಪ ಸೇಲ್ಕರ್,**
ನಿವೃತ್ತ ಶಿಕ್ಷಕರು,
ದಾವಣಗೆರೆ.
ಮೊ : 6363965282

# ಸರ್ಕಾರಿ ಜಮೀನು ಒತ್ತುವರಿ ಮುಲಾಜಿಲ್ಲದೇ ತೆರವು

**ಶಾಸಕ ರೇಣುಕಾಚಾರ್ಯ**

ಹೊನ್ನಾಳಿ,ಮಾ.19- ಸರ್ಕಾರಿ ಜಮೀನು ಒತ್ತುವರಿಯನ್ನು ಯಾವುದೇ ಮುಲಾಜಿಲ್ಲದೇ ತೆರವುಗೊಳಿಸಲಾಗುವುದು ಎಂದು ಸಿಎಂ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ಹೇಳಿದರು.



'ಜಿಲ್ಲಾಧಿಕಾರಿಗಳ ನಡೆ ಹಳ್ಳಿಗಳ ಕಡೆ' ಕಾರ್ಯಕ್ರಮದ ಅನ್ವಯ ತಾಲ್ಲೂಕಿನ ಅರಬಗಟ್ಟೆ ಗ್ರಾಮದಲ್ಲಿ ಶನಿವಾರ ಹಮ್ಮಿಕೊಂಡ 'ಗ್ರಾಮ ವಾಸ್ತವ್ಯ' ಉದ್ಘಾಟಿಸಿ ಅವರು ಮಾತನಾಡಿದರು.

ಅರಬಗಟ್ಟೆ ಗ್ರಾಮದಲ್ಲಿ ಆಶ್ರಯ ಬಡಾವಣೆಗೆಂದು ಮೀಸಲಿರಿಸಿರುವ ಭೂಮಿಯನ್ನು ಒತ್ತುವರಿದಾರರಿಂದ ಬಿಡಿಸಲಾಗುವುದು. ಗ್ರಾಮದಲ್ಲಿನ ನಿವೇಶನ ರಹಿತರನ್ನು ಗುರುತಿಸಿ, ನಿವೇಶನ ವಿತರಿಸಲಾಗುವುದು. ಬಳಿಕ ಸರ್ಕಾರದ ವಸತಿ ಯೋಜನೆಗಳಡಿ ಅವರಿಗೆ ಮನೆಗಳನ್ನು ನಿರ್ಮಿಸಿಕೊಳ್ಳಲು ಧನ ಸಹಾಯ ನೀಡಲಾಗುವುದು. ಆದ್ದರಿಂದ ವಸತಿ ರಹಿತರು ಯಾವುದೇ ಕಾರಣಕ್ಕೂ ವಿಚಲಿತರಾಗಬಾರದು ಎಂದು ತಿಳಿಸಿದರು.

ಅರಬಗಟ್ಟೆ ಗ್ರಾಮದ ಬಗರ್ ಹುಕ್ಕುಂ ಸಾಗುವಳಿದಾರರಿಗೆ ಶೀಘ್ರದಲ್ಲಿಯೇ ಹಕ್ಕುಪತ್ರಗಳನ್ನು ವಿತರಿಸಲಾಗುವುದು. ತಾಲ್ಲೂಕು ಆಡಳಿತ ಸದಾ ಜನರ ಸಮಸ್ಯೆಗಳನ್ನು ಬಗೆಹರಿಸಲು ಸಿದ್ಧವಿರುತ್ತದೆ. ಮಧ್ಯವರ್ತಿಗಳ ಹಾವಳಿ ತಡೆಗಟ್ಟಲು ಸರ್ಕಾರ ಪಹಣಿ, ಜಮೀನಿನ ನಕ್ಷೆಗಳು, ಜಾತಿ ಪ್ರಮಾಣ ಪತ್ರ ಮತ್ತಿತರೆ ದಾಖಲೆಗಳನ್ನು ಜನರ ಮನೆ ಬಾಗಿಲಿಗೆ ತಲುಪಿಸುವ ವ್ಯವಸ್ಥೆಯನ್ನು ಜಾರಿಗೊಳಿಸಿದೆ. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಸೇವೆಗಳನ್ನು ಜನರ ಮನೆ ಬಾಗಿಲಿನಲ್ಲೇ ಒದಗಿಸಲಾಗುವುದು ಎಂದು ವಿವರಿಸಿದರು.

ಉಪ ವಿಭಾಗಾಧಿಕಾರಿ ಹುಲ್ಲುಮನಿ ತಿಮ್ಮಣ್ಣ, ತಹಶೀಲ್ದಾರ್ ಎಚ್.ಜೆ. ರಶ್ಮಿ ಹಾಲೇಶ್, ತಾಪಂ ಇಒ ರಾಮಾ ಭೋವಿ ಇತರರು ಮಾತನಾಡಿದರು.

ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಕೆಂಚಪ್ಪ ಆರ್.ಬಂತಿ, ಕ್ಷೇತ್ರ ಶಿಕ್ಷಣಾಧಿಕಾರಿ ಜಿ.ಇ. ರಾಜೀವ್, ಕೃಷಿ ಉಪ ನಿರ್ದೇಶಕಿ ಎಂ.ಆರ್. ಹಂಸವೇಣಿ, ಸಹಾಯಕ ಕೃಷಿ ನಿರ್ದೇಶಕ ಸಿ.ಟಿ. ಸುರೇಶ್, ತಾಲ್ಲೂಕು ಸಮಾಜ ಕಲ್ಯಾಣ ಇಲಾಖಾಧಿಕಾರಿ ಎಚ್.ಎಲ್. ಉಮಾ, ಹಿಂದುಳಿದ ವರ್ಗಗಳು ಮತ್ತು ಅಲ್ಪ ಸಂಖ್ಯಾತ ಇಲಾಖಾಧಿಕಾರಿ ಟಿ.ಎಂ. ಮೃತ್ಯುಂಜಯ, ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆಯ ಎಇಇ ಎಂ. ನಟರಾಜ್, ಗ್ರಾಪಂ ಅಧ್ಯಕ್ಷೆ ಡಿ.ಕೆ. ಅನಿತಾ, ಉಪಾಧ್ಯಕ್ಷೆ ರೇಣುಕಮ್ಮ, ಮುಖಂಡರಾದ ಅರಬಗಟ್ಟೆ ರಮೇಶ್, ವಿಜಯ್‌ಕುಮಾರ್, ಅರಬಗಟ್ಟೆ ಗ್ರಾಮಸ್ಥರು ಇದ್ದರು.

## ನವೀನ್ ನಳನಳಿಸಲಾಗಲಿಲ್ಲ

ನಳ ನಳಿಸುವುದು ನಿಲ್ಲಿಸಿದ ನವೀನ್
ತನ್ನಿಚ್ಛೆಯಿಂದಲ್ಲ.
ಪುಟಿನ್, ಬಿಡನ್‌ರಿಂದ ಪುಟಿದೆದ್ದ
ಅಹಂಕಾರದ ಯುದ್ಧ ದಾಹದ
ಸೂಪರ್ ಪವರ್ ಅಮಲಿನಿಂದ.

ವೈದ್ಯನಾಗೋ ವಿಶೇಷ ವಿಕ್ರಮ
ಸಾಧಿಸಬೇಕೆಂದಿದ್ದ ಜ್ಞಾನಗೌಡರ್
ಜ್ಞಾನ ಶೇಖರಣೆಗೆ ಅನಿವಾರ್ಯವಾಗಿ ಹೊರಟ
ಉಕ್ರೇನ್‌ಗೆ. ವೈದ್ಯ ಶಿಕ್ಷಣದ ದುಬಾರಿ ವೆಚ್ಚ ಭರಿಸಲಾಗದೆ
ತನ್ನಿಚ್ಛೆಯಿಂದಲ್ಲ.

ಬದಲಾಗಬೇಕು. ಬದಲು ಮಾಡೋಣ.
ಸುವ್ಯವಸ್ಥೆಯ ಸಮಾಜ ಸೃಷ್ಠಿಸಲೇಬೇಕು
ಸಾಮಾಜಿಕ ಸ್ವಾಸ್ಥ್ಯ, ಸಾಮಾಜಿಕ ನ್ಯಾಯ
ಸಮಾನತೆಯ ಕಾಪಾಡಲೇಬೇಕು.
ಡಾ. ನಿರ್ಮಲಾ ಕೇಸರಿ, ಡಾ. ನಾಗರಾಜ್ ಶೆಟ್ಟಿ,
ಡಾ. ಎಲಿಯವರಂತ ಬಡವರೂ ವೈದ್ಯರಾಗಿ
ಬಡಜನಸೇವೆಯ ಹರಿಕಾರರಾಗಿ ಮಾನವೀಯತೆಯಿಂದ
ಮನುಕುಲವ ಉಳಿಸಲಿ. ಎಲ್ಲರಿಗೂ ಒಳಿತಾಗಲಿ.

**- ಶಿವನಕೆರೆ ಬಸವಲಿಂಗಪ್ಪ, ದಾವಣಗೆರೆ**


## JOB OPENINGS

| Sl. No. | Job Title | No Of Openings | Educational Qualification | Experience No of Years |
|---|---|---|---|---|
| 01 | Software Engineers (SAP) | 02 | BCA / MCA / BE | 0-1 |
| 02 | Accountants | 04 | Bcom / Mcom / MBA (FINANCE) TALLY / ERP / SAP BILLING OPERATORS | 0-1 |
| 03 | Accounts (Senior) | 01 | Bcom / Mcom / MBA (FINANCE) GST / INCOME TAX / SAP | 4-5 |
| 04 | Civil Engineers | 02 | Diploma Civil, BE Civil | 0-1 |
| 05 | Marketing/sales Officers | 03 | Bcom / Mcom / BBM / MBA Marketing | 2 |
| 06 | Sales Executives for marketing retail & Project. with 2-wheeler | 10 | Any Degree (Diploma/ITI | 0-1 |
| 07 | Front Office Assistant/Tele BDE Caller (Female) | 02 | Any Degree | 0-1 |
| 08 | Drivers (LCV, HCV) | 03 | LCV, HCV Badge | 0-1 |

Company Name : **HULLUMANE PROPERTIES & POWER PVT LTD.,**
\# Depot Address - Behind Shashi Soap Factory
Land Mark-Towards Shiramagondanahalli Road, From Lokikere Road
Lokikere Industrial Area, Davangere-577 005. Karnataka
**Drop Resume to Email - hrhullumanepropertiespwr@yahoo.com**
**Call/Whatsup - 95130 25000**


## ಗ್ರಾಮ ಪಂಚಾಯಿತಿ ಕಾರ್ಯಾಲಯ, ಕೊಂಡಜ್ಜಿ.

ದಾವಣಗೆರೆ ಜಿಲ್ಲೆ ಹರಿಹರ ತಾಲ್ಲೂಕು

ನಂ:ಗ್ರಾ.ಪಂ.ಕೋ.ಸಿಆರ್: /2021–22 ದಿನಾಂಕ: 16–03–2022

### ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999ರಡಿ)

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಹರಿಹರ ತಾಲ್ಲೂಕು ಕೊಂಡಜ್ಜಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವ 5 ಗ್ರಾಮಗಳಿಗೆ 2020–21ನೇ ಸಾಲಿನ ಮತ್ತು 2021–22ನೇ ಸಾಲಿನ (ಹೆಚ್ಚುವರಿ ಅನುದಾನ) 15ನೇ ಹಣಕಾಸು ಯೋಜನೆಯಡಿಯಲ್ಲಿ ಕುಡಿಯುವ ನೀರಿನ ಸಾಮಾಗ್ರಿ ಮತ್ತು ಬೀದಿ ದೀಪಗಳ ಖರೀದಿ ಮತ್ತು ನಿರ್ವಹಣೆಗಾಗಿ ಸಾಮಾಗ್ರಿ ಪೂರೈಸಲು ಅರ್ಹ ನೋಂದಾಯಿತ ಸಂಸ್ಥೆಗಳಿಂದ ಈ ಕೆಳಕಂಡ ವಿವರಣೆಯಂತೆ ನಿಬಂದನೆಗೊಳಪಟ್ಟು ಮೊಹರು ಮಾಡಿ ಕೋಟೇಷನ್‌ಗಳನ್ನು ಅಧ್ಯಕ್ಷರು/ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಗ್ರಾಮ ಪಂಚಾಯಿತಿ ಕೊಂಡಜ್ಜಿ ಇವರ ಹೆಸರಿಗೆ ಕಳುಹಿಸಲು **ದಿನಾಂಕ:28–02–2022** ರಂದು ಅಧ್ಯಕ್ಷರು ತಿಳಿಸಿದ ಮೇರೆಗೆ ಟೆಂಡರ್ ಕರೆಯಲಾಗಿದೆ.

| ಕ್ರ.ಸಂ | ವರ್ಷ | ಯೋಜನೆಯ ಹೆಸರು | ಕಾಮಗಾರಿ ವಿವರ | ಅಂದಾಜು ಮೊತ್ತ |
|---|---|---|---|---|
| 1 | 2020–21 ಹೆಚ್ಚುವರಿ ಅನುದಾನ | 15ನೇ ಹಣಕಾಸು | ಕುಡಿಯುವ ನೀರಿನ ಸಾಮಾಗ್ರಿ ಖರೀದಿಗಾಗಿ | 2,96,735/- |
| 2 | 2021–22 | 15ನೇ ಹಣಕಾಸು | ಕೊಂಡಜ್ಜಿ ಗ್ರಾಮ ಪಂಚಾಯಿತಿ ಎಲ್ಲಾ ಹಳ್ಳಿಗಳಿಗೆ ಬೀದಿ ದೀಪ ಹಾಗೂ ವಿದ್ಯುತ್ ಸಾಮಾಗ್ರಿ ಖರೀದಿ | 2,00,000/- |
| 3 | 2021–22 | 15ನೇ ಹಣಕಾಸು | ಕೊಂಡಜ್ಜಿ ಗ್ರಾಮ ಪಂಚಾಯಿತಿ ಎಲ್ಲಾ ಹಳ್ಳಿಗಳಿಗೆ ಕುಡಿಯುವ ನೀರಿನ ಸಾಮಾಗ್ರಿ ಖರೀದಿ | 2,09,397/- |
| 4 | 2021–22 | 15ನೇ ಹಣಕಾಸು | ಕೊಂಡಜ್ಜಿ ಗ್ರಾಮ ಪಂಚಾಯಿತಿ ಎಲ್ಲಾ ಹಳ್ಳಿಗಳಿಗೆ ಕುಡಿಯುವ ನೀರಿನ ಮೋಟಾರ್ ರಿಪೇರಿ | 1,75,000/- |
| 5 | 2021–22 ಹೆಚ್ಚುವರಿ ಅನುದಾನ | 15ನೇ ಹಣಕಾಸು | ಕೊಂಡಜ್ಜಿ ಗ್ರಾಮ ಪಂಚಾಯಿತಿ ಎಲ್ಲಾ ಶಾಲೆಗಳಿಗೆ ವಾಟರ್ ಫಿಲ್ಟರ್ ಖರೀದಿ | 2,00,000/- |
| 6 | 2021–22 | 15ನೇ ಹಣಕಾಸು | ಕೊಂಡಜ್ಜಿ ಗ್ರಾಮ ಪಂಚಾಯಿತಿ ಎಲ್ಲಾ ಗ್ರಾಮಗಳಲ್ಲಿ ಎಸ್ಸಿ/ಎಸ್ಟಿ ಬಡಾವಣೆಯಲ್ಲಿ ಕುಡಿಯುವ ನೀರಿನ ಸಾಮಾಗ್ರಿ ಖರೀದಿ | 3,17,495/- |
| | | | ಒಟ್ಟು | **13,98,627/-** |

1) ಖಾಲಿ ಕೋಟೇಷನ್‌ಗಳನ್ನು ವಿತರಿಸುವ **ದಿನಾಂಕ:21–03–2022ರ ಸಂಜೆ 5.00** ಗಂಟೆಯವರೆಗೆ. 2) ಕೋಟೇಷನ್ ಸಲ್ಲಿಸಲು ಕೊನೆಯ **ದಿನಾಂಕ:24–03–2022ರ ಸಂಜೆ 5.00** ಗಂಟೆಯವರೆಗೆ. 3) ಭರ್ತಿ ಮಾಡಿದ ಕೋಟೇಷನ್‌ಗಳನ್ನು ತೆರೆಯುವ **ದಿನಾಂಕ: 25–03–2022ರ ಬೆಳಿಗ್ಗೆ 11.30** ಗಂಟೆಗೆ.

**ಸಹಿ/– ಅಧ್ಯಕ್ಷರು, ಗ್ರಾಮ ಪಂಚಾಯಿತಿ, ಕೊಂಡಜ್ಜಿ, ಹರಿಹರ ತಾಲ್ಲೂಕು**

**ಸಹಿ/– ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯಿತಿ, ಕೊಂಡಜ್ಜಿ, ಹರಿಹರ ತಾಲ್ಲೂಕು**

ವಾಸಾಸಂಇ/ದಾವಣಗೆರೆ/ಎಸ್‌ಎಸ್‌ಸಿ/882/2021–22

## ಪುರಸಭೆ ಕಾರ್ಯಾಲಯ ಹೊನ್ನಾಳಿ-577217

ಜಿಲ್ಲೆ : ದಾವಣಗೆರೆ ರಾಜ್ಯ : ಕರ್ನಾಟಕ

**ಕ್ರಮಾಂಕ: ಹೊ.ಪು/ಜೆಇ/ಸಿಆರ್/02/2021-22** **ದಿನಾಂಕ: 19-03-2022**

### ಇ-ಪ್ರಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ

ಪುರಸಭೆ ಹೊನ್ನಾಳಿಯ 2019-20ನೇ ಸಾಲಿನ ಎಸ್.ಎಫ್.ಸಿ ವಿಶೇಷ ಅನುದಾನದ ಉಳಿಕೆ ಮೊತ್ತದ ಕಾಮಗಾರಿ, 2019-20ನೇ ಸಾಲಿನ 14ನೇ ಹಣಕಾಸು ಯೋಜನೆ, 2017-18ನೇ ರಾಜೀವ್ ಗಾಂಧಿ ವಸತಿ ಯೋಜನೆ ಅನುದಾನ ಹಾಗೂ 2016-17ನೇ ಸಾಲಿನ ಎಸ್.ಸಿ.ಪಿ ಮತ್ತು ಟಿ.ಎಸ್.ಪಿ ಅನುದಾನ (ಉಳಿಕೆ ಮೊತ್ತದ) ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಅರ್ಹ ನೋಂದಾಯಿತ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಗಮಗಳು 2000 ರಂತೆ ಈ ಕೆಳಗಿನಂತೆ ಕಾಮಗಾರಿಗಳ (KW-1) ನಿಯಮಾವಳಿಗಳಂತೆ ಇ-ಪ್ರಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಟೆಂಡರ್ ಕರೆಯಲಾಗಿದ್ದು, ಗುತ್ತಿಗೆದಾರರು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ವೆಬ್‌ಸೈಟ್ www.eproc.karnataka.gov.in ನಲ್ಲಿ ಹಾಗೂ ಕಛೇರಿಯ ವೇಳೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನು ಸಂಪರ್ಕಿಸಿ, ಮಾಹಿತಿ ಪಡೆಯಬಹುದು.

| ಕ್ರ.ಸಂ | ಕಾಮಗಾರಿಯ ಹೆಸರು | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) | ಇಎಂಡಿ ಮೊತ್ತ (ರೂ.ಗಳಲ್ಲಿ) | ಕಾಲಾವಧಿ |
|---|---|---|---|---|
| 01 | ಪಟ್ಟಣದ ದುರ್ಗಿಗುಡಿ ದಕ್ಷಿಣ ಭಾಗದ 5ನೇ ಕ್ರಾಸ್ ಮರಳೋಣಿ ರಸ್ತೆಯಿಂದ ಸ್ವಾಮಿ ವಿವೇಕಾನಂದ ಶಾಲೆಯವರೆಗೆ ಟಾರ್ ರಸ್ತೆ ನಿರ್ಮಾಣ. (DMA/2021-22/OW/WORK_INDENT129709) | 17.34 | ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಇರುವಂತೆ | 3 ತಿಂಗಳು |
| | **2019-20ನೇ ಸಾಲಿನ ಎಸ್.ಎಫ್.ಸಿ ವಿಶೇಷ ಅನುದಾನದ ಉಳಿಕೆ ಮೊತ್ತ** | | | |
| 02 | ಕಛೇರಿಗೆ ಅಗತ್ಯವಿರುವ ಪೀಠೋಪಕರಣಗಳು, ಗಣಕ ಯಂತ್ರಗಳು, ಪ್ರಿಂಟರ್ ಹಾಗೂ ಯು.ಪಿ.ಎಸ್. ದುರಸ್ಥಿಪಡಿಸುವುದು (DMA/2021-22/OW/WORK_INDENT 129711) | 5.00 | ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಇರುವಂತೆ | 3 ತಿಂಗಳು |
| | **2019-20ನೇ ಸಾಲಿನ 14ನೇ ಹಣಕಾಸು ಯೋಜನೆ** | | | |
| 03 | ಹೊನ್ನಾಳಿ ಪಟ್ಟಣದ ರಿ.ಸ ನಂ 29 ರ ಆಶ್ರಯ ಬಡಾವಣೆಗೆ ವಿದ್ಯುದೀಕರಣ ಮಾಡುವುದು (DMA/2021-22/OW/WORK_INDENT129709) | 2.40 | ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಇರುವಂತೆ | 3 ತಿಂಗಳು |
| | **2017-18ನೇ ರಾಜೀವ್ ಗಾಂಧಿ ವಸತಿ ಯೋಜನೆ ಅನುದಾನ** | | | |
| 04 | ಪಟ್ಟಣದ ಎ.ಕೆ ಕಾಲೊನಿ ಹತ್ತಿರ ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪಿಸುವುದು ಹಾಗೂ ಇತರೆ ಅಭಿವೃದ್ಧಿ ಕಾಮಗಾರಿ (DMA/2020-21/OW/WORK_INDENT 112274/Call-2) | 16.31 | ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಇರುವಂತೆ | 3 ತಿಂಗಳು |
| | **2016-17ನೇ ಸಾಲಿನ ಎಸ್.ಸಿ.ಪಿ ಮತ್ತು ಟಿ.ಎಸ್.ಪಿ ಅನುದಾನ (ಉಳಿಕೆ ಮೊತ್ತ)** | | | |
| 05 | ಪಟ್ಟಣದ ತುಂಗಭದ್ರ ಬಡಾವಣೆ ಹತ್ತಿರ ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪಿಸುವುದು ಹಾಗೂ ಇತರೆ ಅಭಿವೃದ್ಧಿ ಕಾಮಗಾರಿ (DMA/2020-21/OW/WORK_INDENT 112275/ Call-2) | 14.34 | ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಇರುವಂತೆ | 3 ತಿಂಗಳು |

- **ಇ-ಪ್ರಕ್ಯೂರ್‌ಮೆಂಟ್ ಪ್ರಕಾರ ಟೆಂಡರ್ ಸಲ್ಲಿಸಲು ಕೊನೆಯ ದಿ: 26-03-2022 ರ ಸಾಯಂಕಾಲ 5.30 ಗಂಟೆಯವರೆಗೆ.**
- **ಟೆಂಡರ್ ತೆರೆಯುವ ದಿನಾಂಕ: 28-03-2022 ಬೆಳಗ್ಗೆ 11.00 ಗಂಟೆಗೆ ಪುರಸಭೆ ಹೊನ್ನಾಳಿ ಕಾರ್ಯಾಲಯದಲ್ಲಿ ತೆರೆಯಲಾಗುವುದು.**
- **ಅನುದಾನದ ಲಭ್ಯತೆ ತಕ್ಕಂತೆ ಕಾರ್ಯಾದೇಶವನ್ನು ನೀಡಿ ಕ್ರಮ ವಹಿಸಲಾಗುವುದು.**

**ಸಹಿ/- ಅಧ್ಯಕ್ಷರು ಪುರಸಭೆ ಹೊನ್ನಾಳಿ.**

**ಸಹಿ/- ಮುಖ್ಯಾಧಿಕಾರಿ ಪುರಸಭೆ, ಹೊನ್ನಾಳಿ.**

# ಹರಪನಹಳ್ಳಿ : ಜಿಲ್ಲಾಧಿಕಾರಿಗಳ ನಡೆ ಹಳ್ಳಿ ಕಡೆಗೆ ತಹಶೀಲ್ದಾರ್ ಪ್ರಭಾಕರಗೌಡ ಚಾಲನೆ



ಹರಪನಹಳ್ಳಿ,ಮಾ.19- ಚಿಗಟೇರಿ ಹೋಬಳಿ ಕಡಬಗೇರಿ ಗ್ರಾಮ ಪಂಚಾಯಿಯಲ್ಲಿ ಶನಿವಾರ ನಡೆದ ಜಿಲ್ಲಾಧಿಕಾರಿಗಳ ನಡೆ ಹಳ್ಳಿ ಕಡೆ ಕಾರ್ಯಕ್ರಮಕ್ಕೆ ಪ್ರಭಾರಿ ತಹಶೀಲ್ದಾರ್ ಪ್ರಭಾಕರ್‌ಗೌಡ ಚಾಲನೆ ನೀಡಿದರು.

ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಯಾದ ಜಿಲ್ಲಾಧಿಕಾರಿಗಳ ನಡೆ ಹಳ್ಳಿ ಕಡೆ ಎಂಬ ಕಾರ್ಯಕ್ರಮದ ಮೂಲಕ ಗ್ರಾಮಗಳಲ್ಲಿ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಪಡೆದುಕೊಳ್ಳಲು ಸಾರ್ವಜನಿಕರು ಕಛೇರಿಗೆ ಅಲೆದಾಡುವುದನ್ನು ತಪ್ಪಿಸುವ ನಿಟ್ಟಿನಲ್ಲಿ ಸರ್ಕಾರ ಇಂಥದೊಂದು ಯೋಜನೆ ಹಾಕಿಕೊಂಡಿದ್ದು, ಇದರ ಸದುಪಯೋಗವನ್ನು ಸಾರ್ವಜನಿಕರು ಪಡೆದುಕೊಳ್ಳಬೇಕು ಎಂದು ತಹಶೀಲ್ದಾರ್ ಪ್ರಭಾಕರ್‌ಗೌಡ ತಿಳಿಸಿದರು.

ಈ ವೇಳೆ ಸರ್ಕಾರದ ವಿವಿಧ ಸೌಲಭ್ಯಗಳಾದ ಸಾಮಾಜಿಕ ಭದ್ರತೆ ಯೋಜನೆ, ವಿಧವಾ, ಸಂಧ್ಯಾ ಸುರಕ್ಷಾ, ವೃದ್ಧಾಪ್ಯ ವೇತನ, ಪಡಿತರ ಚೀಟಿ ಸೇರಿದಂತೆ, ಹಲವು ಸಮಸ್ಯೆಗಳ ಕುರಿತು 90 ಕ್ಕೂ ಹೆಚ್ಚು ಅರ್ಜಿಗಳು ಬಂದಿದ್ದವು, ಸ್ಥಳದಲ್ಲೇ 25ಕ್ಕೂ ಹೆಚ್ಚು ಅರ್ಜಿಗಳನ್ನು ಇತ್ಯರ್ಥಪಡಿಸಲಾಯಿತು.

ಬಳಿಕ ಇದೇ ಸಂದರ್ಭದಲ್ಲಿ ವಿಕಲಚೇತನರಿಗೆ ಸ್ಮಾರ್ಟ್‌ಕಾರ್ಡ್ ವಿತರಣೆ ಮಾಡಲಾಯಿತು.

ತಾ.ಪಂ. ಕಾರ್ಯ ನಿರ್ವಣಾಧಿಕಾರಿ ಕೆ.ಆರ್. ಪ್ರಕಾಶ, ಕ್ಷೇತ್ರಶಿಕ್ಷಣಾಧಿಕಾರಿ ಯು.ಬಸವರಾಜಪ್ಪ, ಬಿಸಿಎಂ ಇಲಾಖೆಯ ವಿಸ್ತರಣಾಧಿಕಾರಿ ಕೆ.ಭೀಮಪ್ಪ, ಸಮಾಜ ಕಲ್ಯಾಣಾಧಿಕಾರಿ ರೇಣುಕಾದೇವಿ, ಸಿಡಿಪಿಓ ಜಿ.ಹರೀಶ್, ಶಿರಸ್ತೇದಾರ ಶಿವಕುಮಾರಗೌಡ, ಚಿಗಟೇರಿ ಹೋಬಳಿ ಕಂದಾಯ ನಿರೀಕ್ಷಕ ಎನ್.ನಾಗರಾಜ್, ಕಡಬಗೇರಿ ಗ್ರಾ.ಪಂ ಅಧ್ಯಕ್ಷೆ ಅನು, ಮಂಜುನಾಥ, ಪಿಡಿಓ ಕೃಷ್ಣಪ್ಪ, ತಾ.ಪಂ ಎಂ.ಆರ್.ಡಬ್ಲ್ಯೂ ಆರ್. ಧನರಾಜ್, ಗ್ರಾಮ ಲೆಕ್ಕಾಧಿಕಾರಿಗಳಾದ ಬಸವರಾಜ್, ಹೆಚ್.ಕವಿತಾ, ಜಗದೀಶ್, ಚನ್ನಬಸಪ್ಪ, ಪಂಪಾಪತಿ, ಕೊಟ್ರೇಶ್ ಸೇರಿದಂತೆ ಗ್ರಾಮಸ್ಥರು ಇದ್ದರು.

# ನಗರದಲ್ಲಿ ಇಂದು ವರದಿಗಾರರ ಕೂಟದ ನೂತನ ಪದಾಧಿಕಾರಿಗಳ ಪದಗ್ರಹಣ

ವರದಿಗಾರರ ಕೂಟದ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭವು ಇಂದು ಬೆಳಿಗ್ಗೆ 11.30 ಕ್ಕೆ ಕುವೆಂಪು ಕನ್ನಡ ಭವನದಲ್ಲಿ ನಡೆಯಲಿದೆ. ಶ್ರೀ ಬಸವಪ್ರಭು ಸ್ವಾಮೀಜಿ ಕಾರ್ಯಕ್ರಮ ಉದ್ಘಾಟನೆ ನೆರವೇರಿಸಲಿದ್ದು, ಡಾ. ಶಾಮನೂರು ಶಿವಶಂಕರಪ್ಪ, ಜಿ.ಎಂ. ಸಿದ್ದೇಶ್ವರ, ಎಂ.ಪಿ. ರೇಣುಕಾಚಾರ್ಯ ಮುಖ್ಯಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

ಸ್ಥಳೀಯ ಪತ್ರಿಕೆಗಳು ಮತ್ತು ವೆಬ್ ಜರ್ನಲಿಸಂ ವಿಷಯ ಕುರಿತು ಹಿರಿಯ ಪತ್ರಕರ್ತ ಲೇಖಕರಾದ ಎನ್. ರವಿಕುಮಾರ್ ಟೆಲೆಕ್ಸ್ ಉಪನ್ಯಾಸ ನೀಡುವರು. ಕೂಟದ ಅಧ್ಯಕ್ಷ ಕೆ. ಏಕಾಂತಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ. ವರದಿಗಾರರ ಕೂಟದ ನಿಕಟಪೂರ್ವ ಅಧ್ಯಕ್ಷ ಜಿ. ಎಂ.ಆರ್. ಆರಾಧ್ಯ ಅಧಿಕಾರ ಹಸ್ತಾಂತರಿಸಲಿದ್ದಾರೆ. ಪ್ರಧಾನ ಕಾರ್ಯದರ್ಶಿ ಡಾ.ಸಿ. ವರದರಾಜ್ ಪ್ರಾಸ್ತಾವಿಕ ನುಡಿಗಳನ್ನಾಡುವರು. ಖಜಾಂಚಿ ಮಧು ನಾಗರಾಜ್ ಕುಂದುವಾಡ ಸ್ವಾಗತಿಸುವರು.

# ಸರ್ಕಾರಿ ಶಾಲೆಗಳ ಬೇಡಿಕೆ ಹೆಚ್ಚಿಸುವ ಕೆಲಸ ಮಾಡಬೇಕು



ದಾವಣಗೆರೆ, ಮಾ.19- ಬೋಧನೆ, ತರಗತಿಗಳಲ್ಲಿ ಮಕ್ಕಳ ಬಗ್ಗೆ ಕಾಳಜಿ ಸೇರಿದಂತೆ ಪಠ್ಯ ಮತ್ತು ಪಠ್ಯೇತರ ಎರಡರಲ್ಲೂ ಗುಣಮಟ್ಟದ ಮುಖೇನ ಮುಂದಿನ ದಿನಗಳಲ್ಲಿ ಮಕ್ಕಳನ್ನು ಸೆಳೆದು ಸರ್ಕಾರಿ ಶಾಲೆಗಳ ಬೇಡಿಕೆ ಹೆಚ್ಚಿಸುವ ಕೆಲಸ ಮಾಡಬೇಕು. ಸರ್ಕಾರಿ ಶಾಲೆಗಳೆಂದರೆ ದೇವರ ಶಾಲೆಗಳಂತೆ ಮಾಡಬೇಕು ಎಂದು ಸಂಸದ ಜಿ. ಎಂ. ಸಿದ್ದೇಶ್ವರ ಅವರು ಶಿಕ್ಷಕರಿಗೆ ಕಿವಿಮಾತು ಹೇಳಿದರು.

ನಗರದ ಜಿಲ್ಲಾ ಗುರುಭವನದಲ್ಲಿ ಕರ್ನಾಟಕ ಸಾವಿತ್ರಿಬಾಯಿ ಫುಲೆ ಶಿಕ್ಷಕಿಯರ ಸಂಘದ ವತಿಯಿಂದ ಇಂದು ಹಮ್ಮಿಕೊಂಡಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಮತ್ತು ಸಾಧಕಿಯರಿಗೆ ಅನುಪಮ ಸೇವಾ ರತ್ನ ಪ್ರಶಸ್ತಿ ಪರಸ್ಕಾರ ಸಮಾರಂಭ ಹಾಗೂ ಶೈಕ್ಷಣಿಕ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಬಿಸಿಯೂಟ, ಉಚಿತ ಶಿಕ್ಷಣ, ಸಮವಸ್ತ್ರ, ಪಠ್ಯ ಪುಸ್ತಕ ನೀಡುತ್ತೇವೆಂದರೂ ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಸಂಖ್ಯೆ ಕುಸಿದಿದೆ. ಆದರೆ ದುಪ್ಪಟ್ಟು ಹಣ ನೀಡಿ ಖಾಸಗಿ ಶಾಲೆಗಳತ್ತ ಮುಖ ಮಾಡುವಂತಾಗಿದೆ. ಇದಕ್ಕೆ ವ್ಯವಸ್ಥೆಯೊಂದು ಕಡೆಯಾದರೆ, ಸರ್ಕಾರಿ ಶಾಲಾ ಶಿಕ್ಷಕರು ಮಕ್ಕಳ ದಾಖಲಾತಿ ಹೆಚ್ಚಿಸಲು ಶ್ರಮ ವಹಿಸುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಶಾಸಕ ವೈ.ಎ. ನಾರಾಯಣಸ್ವಾಮಿ ಮಾತನಾಡಿ, ಅನುದಾನ ರಹಿತ ಬಡ ಶಾಲೆಗಳ ಶಿಕ್ಷಕರಿಗೆ ಸಂಬಳ ಬಹಳ ಕಡಿಮೆ. ಅವರಿಗೆ ಆಯುಷ್ಮಾನ್ ಭಾರತ್ ಕಾರ್ಡ್ ಇಲ್ಲ. ಹಾಗಾಗಿ ರಾಜ್ಯದಲ್ಲಿನ ಸರ್ಕಾರಿ, ಅನುದಾನಿತ, ಅನುದಾನ ರಹಿತ ಸೇರಿದಂತೆ 5 ಲಕ್ಷ ಮಂದಿ ಶಾಲಾ ಶಿಕ್ಷಕರಿಗೆಲ್ಲಾ ಯಾವುದೇ ಕಾಯಿಲೆ ಬಂದರೂ ಯಾವುದೇ ಆಸ್ಪತ್ರೆಗಳಿಗೆ ಹೋದರೂ ಉಚಿತ ವೈದ್ಯಕೀಯ ಸೇವೆ ಸಿಗುವಂತಹ ಆರೋಗ್ಯ ಕಾರ್ಡ್ ಕೊಡಿಸುವ ಆಸೆ ಇದೆ. ಇದಕ್ಕೆ ಪ್ರಯತ್ನ ನಡೆಯುತ್ತಿದ್ದು, ಸ್ವಲ್ಪ ಕಾನೂನು ತಿದ್ದುಪಡಿಯಾಗಬೇಕಿದೆ ಎಂದರು.

### ಶೈಕ್ಷಣಿಕ ಕಾರ್ಯಾಗಾರದಲ್ಲಿ ಶಿಕ್ಷಕರಿಗೆ ಸಂಸದ ಸಿದ್ದೇಶ್ವರ ಕಿವಿಮಾತು

ಶಾಸಕ ಎಂ. ಚಿದಾನಂದಗೌಡ ಮಾತನಾಡಿ, ಹೆಣ್ಣು ವ್ಯಕ್ತಿಯಲ್ಲ ಶಕ್ತಿ. ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ ಎಂಬ ನಾಣ್ನುಡಿಗೆ ಪೂರಕವಾಗಿ ರಾಜ್ಯದಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಣದ ಹಂತದಲ್ಲಿ ಶೇ. 60ಕ್ಕೂ ಹೆಚ್ಚು ಮಂದಿ ಮಾತೆಯರು ಶಿಕ್ಷಕಿಯರಾಗಿ ಸೇವೆ ಸಲ್ಲಿಸುತ್ತಾ ದೇಶವನ್ನು ಸದೃಢವಾಗಿ ಕಟ್ಟುವ ಕೆಲಸ ಮಾಡುತ್ತಿದ್ದಾರೆ ಎಂದು ಹೇಳಿದರು.

ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರಾದ ರಾಜೇಶ್ವರಿ ಎನ್. ಹೆಗಡೆ ಅವರು ಮಹಿಳಾ ಸಬಲೀಕರಣ ಮತ್ತು ಕಾನೂನು ಅರಿವು ವಿಷಯ ಕುರಿತು ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ಸಾವಿತ್ರಿಬಾಯಿ ಫುಲೆ ಶಿಕ್ಷಕಿಯರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷರಾದ ಕಲ್ಪನಾ ರವೀಂದ್ರನಾಥ್ ಅಧ್ಯಕ್ಷತೆ ವಹಿಸಿದ್ದರು. ಸಂಸ್ಥಾಪಕ ರಾಜ್ಯಾಧ್ಯಕ್ಷರಾದ ಡಾ. ಲತಾ ಎಸ್. ಮುಳ್ಳೂರ, ನಗರ ಪಾಲಿಕೆ ಮೇಯರ್ ಜಯಮ್ಮ ಗೋಪಿನಾಯ್ಕ, ಉಪಮೇಯರ್ ಗಾಯತ್ರಿ ಖಂಡೋಜಿರಾವ್, ನಗರ ಪಾಲಿಕೆ ಸದಸ್ಯ ಪ್ರಸನ್ನ ಕುಮಾರ್, ಜಿಲ್ಲಾ ಪಂಚಾಯತ್ ಜಿಲ್ಲಾ ಅಕ್ಷರ ದಾಸೋಹ ಶಿಕ್ಷಣಾಧಿಕಾರಿ ಡಾ. ಜಿ. ಪುಷ್ಪಲತಾ, ದಕ್ಷಿಣ ವಲಯ ಕ್ಷೇತ್ರ ಶಿಕ್ಷಣಾಧಿಕಾರಿ ಎಂ. ನಿರಂಜನ ಮೂರ್ತಿ, ಉತ್ತರ ವಲಯ ಕ್ಷೇತ್ರ ಶಿಕ್ಷಣಾಧಿಕಾರಿ ಟಿ. ಅಂಬಣ್ಣ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಬಿ. ಪಾಲಾಕ್ಷಿ, ಜಿಲ್ಲಾ ಕಾರ್ಯದರ್ಶಿ ಸಿ. ಗುರುಮೂರ್ತಿ, ಕರ್ನಾಟಕ ರಾಜ್ಯ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಡಿ. ರಾಮಪ್ಪ, ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷೆ ಸುಮತಿ ಜಯಪ್ಪ, ಡಿ.ಡಿ. ಹಾಲೇಶ್, ಡಿ.ಎಂ. ಮಂಜುನಾಥಯ್ಯ, ಶ್ರೀನಿವಾಸ ನಾಯಕ, ಎಂ. ವೆಂಕಟೇಶ್ ಸೇರಿದಂತೆ ಇತರರಿದ್ದರು.

### ಬಿಜೆಪಿ ಸರ್ಕಾರದ ಅಜೆಂಡಾದಲ್ಲಿ ಮಹಿಳೆಯರಿಗೆ ರಾಜಕೀಯ ಮೀಸಲಾತಿ

"ವಿಧಾನಸಭೆ, ವಿಧಾನಪರಿಷತ್ ಅಷ್ಟೇ ಅಲ್ಲ ಲೋಕಸಭೆ, ರಾಜ್ಯ ಸಭೆಯಲ್ಲೂ ಮಹಿಳೆಯರಿಗೆ ರಾಜಕೀಯ ಮೀಸಲಾತಿ ಇಲ್ಲವಾಗಿದೆ. ಹಿಂದೆ ಕಾಂಗ್ರೆಸ್ ಸರ್ಕಾರವಿದ್ದಾಗ ಮಹಿಳಾ ಮೀಸಲಾತಿಗಾಗಿ ನಾನೂ ಒಳಗೊಂಡಂತೆ ಹಲವರು ಒತ್ತಾಯ ಮಾಡಿದ್ದೆವು. ಆದರೀಗ ನಮ್ಮ ಬಿಜೆಪಿ ಸರ್ಕಾರದ ಅಜೆಂಡಾದಲ್ಲಿ ಮಹಿಳೆಯರಿಗೆ ರಾಜಕೀಯ ಮೀಸಲಾತಿ ನೀಡಬೇಕೆಂದಿದೆ. ಇನ್ನೂ 2 ವರ್ಷ 3 ತಿಂಗಳು ನಮ್ಮ ಸರ್ಕಾರದ ಅವಧಿಯಿದ್ದು, ಪುನಃ ನಮ್ಮ ಬಿಜೆಪಿ ಸರ್ಕಾರ ಅಧಿಕಾರ ಹಿಡಿಯಲಿದೆ.

- ಜಿ.ಎಂ. ಸಿದ್ದೇಶ್ವರ, ಸಂಸದರು

### ಒಪಿಎಸ್ ಜಾರಿಯ ಕಾಲ ಹತ್ತಿರವಿದೆ

"ಕರ್ನಾಟಕದಲ್ಲೂ ಎನ್ ಪಿಎಸ್ ತೆಗೆದು ಹಾಕಿ ಒಪಿಎಸ್ ಜಾರಿ ಮಾಡುವ ಕಾಲ ಹತ್ತಿರ ಬಂದಿದೆ. ರಾಜ್ಯದಲ್ಲಿ 37 ಶೈಕ್ಷಣಿಕ ಜಿಲ್ಲೆಗಳ ಸುಮಾರು 200 ಕೋಟಿ ಬಾಕಿ ಇರುವ ವೈದ್ಯಕೀಯ ಬಿಲ್ ಮಂಜೂರಾತಿಗಾಗಿ ಕಳೆದ ಮೂರು ತಿಂಗಳಿಂದ ಪ್ರಯತ್ನಿಸುತ್ತಿದ್ದೇನೆ. ವರ್ಗಾವಣೆ ನಿಯಂತ್ರಣ ಕಾಯ್ದೆಯಲ್ಲಿನ ಲೋಪ-ದೋಷ ಸರಿಪಡಿಸುತ್ತಿದ್ದೇವೆ. ಕರ್ನಾಟಕ ರಾಜ್ಯದಲ್ಲಿ ಎನ್ ಇಪಿ ಮೊಟ್ಟ ಮೊದಲು ಜಾರಿಯಾಗಬೇಕು. ಆ ಮುಖಾಂತರ 35 ವರ್ಷಗಳ ಹಿಂದಿನ ಶಿಕ್ಷಣ ಪದ್ಧತಿಗೆ ಸಾಣೆ ಹಿಡಿದು ತಂತ್ರಜ್ಞಾನ ಜೋಡಿಸಿ, ಮಾನವೀಯತೆ ಮತ್ತು ನೈತಿಕತೆ ಪೋಣಿಸಿ ಮಾನವಂತ, ಉತ್ಕೃಷ್ಟ ಸಮಾಜ ಕಟ್ಟಲು, ತಂತ್ರಜ್ಞಾನದಲ್ಲಿ ಭಾರತ ದೇಶವನ್ನು ಯಾರೂ ಮೀರಿಸದಂತೆ ನಾವೇ ಮುಂಚೂಣಿಯಲ್ಲಿರುವಂತೆ ಮಕ್ಕಳ ಕೈಯಲ್ಲಿ ಶಿಕ್ಷಣ ನೀಡಲು ಶಿಕ್ಷಕರೆಲ್ಲಾ ಅಣಿಯಾಗಲು ಹೊಸ ಶಿಕ್ಷಣ ಪದ್ಧತಿ ಜಾರಿಗೆ ನಮ್ಮೆಲ್ಲರ ಆಸೆ ಇದೆ.

- ವೈ.ಎ. ನಾರಾಯಣಸ್ವಾಮಿ, ವಿಧಾನ ಪರಿಷತ್ ಸದಸ್ಯ

# ಹಾಸ್ಯವನ್ನು ಸಕಾರಾತ್ಮಕವಾಗಿ ಸ್ವೀಕರಿಸುವ ಗುಣ ಬೇಕು

(1ನೇ ಪುಟದಿಂದ) ಪ್ರಾಧ್ಯಾಪಕ, ಪ್ರಾಂಶುಪಾಲ ಹಾಗೂ ಆಡಳಿತಾಧಿಕಾರಿಯಾಗಿ ಪ್ರಾಮಾಣಿಕವಾಗಿ ಕಾರ್ಯ ನಿರ್ವಹಿಸಿದ್ದಾರೆ. ಕೃತಿಗಳ ರಚನೆ, ಅನುವಾದ ಹಾಗೂ ಹಾಸ್ಯ ಬರಹಗಳಲ್ಲಿ ಸಾಧನೆ ಮಾಡಿದ್ದಾರೆ ಎಂದು ಹೇಳಿದರು.

ಹಿರಿಯ ಪತ್ರಕರ್ತ ಎನ್. ವಿಶಾಖ ಮಾತನಾಡಿ, ರಂಗನಾಥ್ ಅವರು ತಮ್ಮ ಹಾಸ್ಯ ಬರಹಗಳಲ್ಲಿ ಪುರಾಣ, ರಾಜಕಾರಣ, ಮಹಿಳಾ ವಿಷಯಗಳೂ ಸೇರಿದಂತೆ ಹಲವಾರು ವಿಷಯಗಳನ್ನು ದುಡಿಸಿಕೊಂಡಿದ್ದಾರೆ. ಹಾಸ್ಯವನ್ನು ಬರಹ ರೂಪದಲ್ಲಿ ಸಶಕ್ತವಾಗಿ ಬಿಂಬಿಸುವ ಕಷ್ಟದ ಕೆಲಸವಾಗಿದ್ದು, ಅದನ್ನು ರಂಗನಾಥ್ ಅವರು ಸಮರ್ಥವಾಗಿ ಬಳಸಿದ್ದಾರೆ ಎಂದು ಹೇಳಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ತರಳಬಾಳು ವಿದ್ಯಾಸಂಸ್ಥೆ ಆಡಳಿತಾಧಿಕಾರಿ ಪ್ರೊ.ಎಸ್.ಬಿ. ರಂಗನಾಥ್, ತರಳಬಾಳು ಹಿರಿಯ ಜಗದ್ಗುರು ಶಿವಕುಮಾರ ಶಿವಾಚಾರ್ಯ ಸ್ವಾಮೀಜಿ ಹಾಗೂ ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಅವರ ಪ್ರೋತ್ಸಾಹದಿಂದಾಗಿ ತಾವು ಸಾಧನೆ ಮಾಡಲು ಸಾಧ್ಯವಾಯಿತು. ಹಿರಿಯ ಜಗದ್ಗುರುಗಳು ನನಗೆ ನಡೆ - ನುಡಿ ಕಲಿಸಿದರು. ಜವಾಬ್ದಾರಿಗಳನ್ನು ನಿರ್ವಹಿಸುವ ವಿಶ್ವಾಸ ತುಂಬಿದರು ಎಂದು ತಿಳಿಸಿದರು.

ಶಿಕ್ಷಣ ತಜ್ಞರು, ತರಳಬಾಳು ವಿದ್ಯಾಸಂಸ್ಥೆ ವಿಶೇಷಾಧಿಕಾರಿಗಳೂ ಆದ ಪ್ರೊ.ಹೆಚ್.ವಿ. ವಾಮದೇವಪ್ಪ ಹಾಗೂ ಅಭಿನಂದನಾ ಗ್ರಂಥದ ಪ್ರಧಾನ ಸಂಪಾದಕ ಡಾ. ನಾ. ಲೋಕೇಶ್ ಒಡೆಯರ್ ಮಾತನಾಡಿದರು. ವೇದಿಕೆಯ ಮೇಲೆ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ. ವಾಮದೇವಪ್ಪ ಹಾಗೂ ಪ್ರೊ. ಎಸ್.ಬಿ.ರಂಗನಾಥ್ ಅವರ ಪತ್ನಿ ಎಂ. ರತ್ನಮ್ಮ ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಕಚಗುಳಿ(ಗೆ) ಕಾಲ ಕಿರುನಗೆ ಬರಹಗಳ ಸಂಗ್ರಹ ಬಿಡುಗಡೆ ಮಾಡಲಾಯಿತು.

ಪ್ರೊ. ಎಸ್.ಬಿ. ಬಸವರಾಜಪ್ಪ ಸ್ವಾಗತಿಸಿದರು. ಸಿರಿಗೆರೆ ನಾಗರಾಜ್ ನಿರೂಪಿಸಿದರು.

### ಉಕ್ರೇನ್ ವಿದ್ಯಾರ್ಥಿಗಳ ಸುರಕ್ಷತೆಗೆ ಸಹಕರಿಸಿದ ತರಳಬಾಳು ಶ್ರೀ ನೆರೆ ದೇಶಗಳ ವಿದ್ಯಾರ್ಥಿಗಳ ಸಂಕಷ್ಟದಲ್ಲಿ ತ್ರಿವರ್ಣ ಧ್ವಜದ ರಕ್ಷಣೆ

ದಾವಣಗೆರೆ, ಮಾ. 19- ಭಾರತದ ರಾಯಭಾರಿ ಕಚೇರಿಯ ಅವಿರತ ಶ್ರಮದಿಂದಾಗಿ ಉಕ್ರೇನ್‌ನಲ್ಲಿದ್ದ ಭಾರತದ ವಿದ್ಯಾರ್ಥಿಗಳು ಸುರಕ್ಷಿತವಾಗಿ ವಾಪಸ್ಸಾಗಲು ಸಾಧ್ಯವಾಯಿತು. ಭಾರತದ ತ್ರಿವರ್ಣ ಧ್ವಜ ಸಮರ ಭೂಮಿಯಲ್ಲೂ ವಿದ್ಯಾರ್ಥಿಗಳನ್ನು ರಕ್ಷಿಸಿತು ಎಂದು ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಹೇಳಿದ್ದಾರೆ.

ನಗರದ ಕುವೆಂಪು ಕನ್ನಡ ಭವನದಲ್ಲಿ ಆಯೋಜಿಸಲಾಗಿದ್ದ ಪ್ರೊ.ಎಸ್.ಬಿ. ರಂಗನಾಥ್ ಅವರಿಗೆ ಸಹಸ್ರ ಚಂದ್ರದರ್ಶನ ಅಭಿನಂದನೆ ಮತ್ತು 'ರಂಗ ವಿಸ್ತಾರ' ಅಭಿನಂದನಾ ಗ್ರಂಥ ಲೋಕಾರ್ಪಣೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಮಾತನಾಡುತ್ತಿದ್ದರು.

ಉಕ್ರೇನ್‌ನ ಖಾರ್ಕೀವ್‌ನಲ್ಲಿ ಮಠದ 300 ವಿದ್ಯಾರ್ಥಿಗಳು ಸಿಲುಕಿದ್ದರು. ಬಂಕರ್‌ನಲ್ಲಿ ಅನ್ನ – ನೀರಿಲ್ಲದ ಪರಿಸ್ಥಿತಿಯಲ್ಲಿದ್ದ ಅವರು ತಮ್ಮನ್ನು ಸಂಪರ್ಕಿಸಿದ್ದರು. ಸಂಸದ ಜಿ.ಎಂ.ಸಿದ್ದೇಶ್ವರ ಅವರ ಅಳಿಯ ಆಗಿರುವ ಗಯಾನ ರಾಯಭಾರಿ ಶ್ರೀನಿವಾಸ್ ಅವರನ್ನು ಸಂಪರ್ಕಿಸಿ, ವಿದ್ಯಾರ್ಥಿಗಳ ಬಗ್ಗೆ ತಿಳಿಸಿದೆ ಎಂದು ಸ್ವಾಮೀಜಿ ತಿಳಿಸಿದರು.

ಶ್ರೀನಿವಾಸ್ ಅವರು ಉಕ್ರೇನ್‌ನಲ್ಲಿರುವ ಭಾರತದ ರಾಯಭಾರಿ ಜೊತೆ ಮಾತನಾಡಿದರು. ಉಕ್ರೇನ್ ಹಾಗೂ ರಷ್ಯಾಗಳ ರಾಯಭಾರಿ ಕಚೇರಿಗಳ ಜೊತೆ ಮಾತನಾಡಿದ ನಂತರ, ವಿದ್ಯಾರ್ಥಿಗಳ ರಕ್ಷಣೆಗೆ ಮಾರ್ಗ ಸಿದ್ಧವಾಯಿತು. ಭಾರತದ ವಿದ್ಯಾರ್ಥಿಗಳು ತ್ರಿವರ್ಣ ಧ್ವಜ ಹಿಡಿದು ಪಿಸೊಚಿನ್‌ಗೆ ತೆರಳುವಂತೆ ಸೂಚನೆ ನೀಡಲಾಯಿತು. ಸುಮಾರು ಸಾವಿರ ಭಾರತೀಯರು ಪಿಸೊಚಿನ್‌ಗೆ ತೆರಳಿದರು. ಭಾರತದ ಧ್ವಜ ಹಿಡಿದು ಭಾರತೀಯರಷ್ಟೇ ಅಲ್ಲದೇ, ನೆರೆ ದೇಶಗಳ ವಿದ್ಯಾರ್ಥಿಗಳೂ ಬಂದರು. ಭಾರತದ ಧ್ವಜ ಭಾರತೀಯರಷ್ಟೇ ಅಲ್ಲದೇ ಸಹೋದರ ದೇಶಗಳ ಜನರನ್ನೂ ರಕ್ಷಿಸಿತು ಎಂದು ಸ್ವಾಮೀಜಿ ಹೇಳಿದರು.

ಯುದ್ಧ ಸಂದರ್ಭದ ದುರ್ಲಾಭ ಪಡೆದ ಕೆಲವರು, 500 ಡಾಲರ್ ಕೊಟ್ಟರೆ ರೊಮೇನಿಯಾ ಗಡಿಗೆ ಕರೆದೊಯ್ಯುವುದಾಗಿ ವಿದ್ಯಾರ್ಥಿಗಳಿಗೆ ಆಮಿಷ ಒಡ್ಡಿದರು. ತಾವು ಇದನ್ನು ಒಪ್ಪದಂತೆ ತಿಳಿಸಿದ್ದೆವು. ಆದರೂ, ಕೆಲವರು ಹಣ ಕೊಟ್ಟು ಹೊರಟರು. ಯುದ್ಧ ಪರಿಸ್ಥಿತಿ ಕಾರಣದಿಂದಾಗಿ ಎರಡೇ ಗಂಟೆಯಲ್ಲಿ ಅವರು ವಾಪಸ್ ಬಂದರು ಎಂದು ಶ್ರೀಗಳು ತಿಳಿಸಿದರು.

ನಂತರ ಭಾರತದ ರಾಯಭಾರಿ ಕಚೇರಿಯೇ ಪಿಸೊಚಿನ್‌ನಿಂದ ವಿದ್ಯಾರ್ಥಿಗಳ ರಕ್ಷಣೆಗೆ ಬಸ್ ಆಯೋಜಿಸಿತು. ರಷ್ಯಾ ಹಾಗೂ ಭಾರತದ ಸುದೀರ್ಘ ಕಾಲದ ಗೆಳೆತನ ಈ ವಿಷಯದಲ್ಲಿ ನೆರವಾಯಿತು ಎಂದವರು ಹೇಳಿದರು.

ಭಾರತದ ಎಲ್ಲ ವಿದ್ಯಾರ್ಥಿಗಳು ಸುರಕ್ಷಿತವಾಗಿ ಬಂದರಾದರೂ ನವೀನ್ ಶೇಖರಗೌಡ ಮಾತ್ರ ದಾಳಿಗೆ ಸಿಲುಕಿ ಸಾವನ್ನಪ್ಪಿದರು. ಅವರ ಮೃತದೇಹ ಖಾರ್ಕೀವ್‌ನ ಆಸ್ಪತ್ರೆಯಲ್ಲಿ ಸುರಕ್ಷಿತವಾಗಿರುವ ಬಗ್ಗೆ ಬ್ಯಾಡಗಿ ಮೂಲದ ವಿದ್ಯಾರ್ಥಿ ವಿಶಾಲ್ ಈಶ್ವರ್ ಸಂಪಣ್ಣವರ್ ತಮ್ಮನ್ನು ಭೇಟಿ ಮಾಡಿದಾಗ ತಿಳಿಸಿದ್ದರು. ಆ ಮಾಹಿತಿಯನ್ನು ರಾಯಭಾರಿ ಕಚೇರಿಗೆ ತಿಳಿಸಿದ ನಂತರ, ಮೃತದೇಹವನ್ನು ಸುರಕ್ಷಿತವಾಗಿ ವಾಪಸ್ ತರಲು ನೆರವಾಯಿತು ಎಂದು ಸ್ವಾಮೀಜಿ ತಿಳಿಸಿದರು.

# 30 ಲಕ್ಷ ಜನ ಉಕ್ರೇನ್‌ನಿಂದ ಪಲಾಯನ ಲಕ್ಷಾಂತರ ಮಕ್ಕಳ ಭವಿಷ್ಯವೀಗ ಅತಂತ್ರ

ಕೀವ್, ಮಾ. 19 – ಉಕ್ರೇನ್ ಮೇಲೆ ರಷ್ಯಾ ದಾಳಿ ನಡೆಸಿದ ನಂತರ ಅತಿ ದೊಡ್ಡ ಪ್ರಮಾಣದ ನಿರಾಶ್ರಿತರ ವಲಸೆ ಕಂಡು ಬರುತ್ತಿದೆ. ಬಾಂಬ್ ದಾಳಿ ತೀವ್ರವಾಗುತ್ತಿರುವಂತೆಯೇ, ಮಾನವೀಯ ಬಿಕ್ಕಟ್ಟು ಉಲ್ಬಣಿಸಿದೆ.

ಫೆಬ್ರವರಿ 24ರ ನಂತರ 30 ಲಕ್ಷಕ್ಕೂ ಹೆಚ್ಚು ಜನರು ಪೋಲ್ಯಾಂಡ್ ಹಾಗೂ ಇತರೆ ದೇಶಗಳ ಗಡಿ ದಾಟಿ ಪಲಾಯನ ಮಾಡಿದ್ದಾರೆ.

ಬಾಂಬ್ ದಾಳಿಯಿಂದ ನಾಗರಿಕರು ತಪ್ಪಿಸಿಕೊಂಡು ಹೋಗಲು ಇರುವ ಕಾರಿಡಾರ್‌ಗಳ ಮೇಲೂ ರಷ್ಯಾ ದಾಳಿ ನಡೆಸುತ್ತಿದೆ ಹಾಗೂ ತಡೆಗಳನ್ನು ಒಡ್ಡುತ್ತಿದೆ. ಮರಿಯುಪೋಲ್ ಆಸ್ಪತ್ರೆಯಲ್ಲಿ 400 ರೋಗಿಗಳು ಹಾಗೂ ಸಿಬ್ಬಂದಿಯನ್ನು ಒತ್ತೆಯಾಳಾಗಿ ಇಟ್ಟುಕೊಳ್ಳಲಾಗಿದೆ ಎಂದು ಉಕ್ರೇನ್ ಆರೋಪಿಸಿದೆ.

18ರಿಂದ 60 ವರ್ಷದ ಪುರುಷರು ದೇಶ ತೊರೆಯದಂತೆ ಉಕ್ರೇನ್ ನಿರ್ಬಂಧ ಹೇರಿದೆ. ಇಲ್ಲದೇ ಹೋಗಿದ್ದರೆ ದೇಶ ತೊರೆದವರ ಸಂಖ್ಯೆ ಇನ್ನಷ್ಟು ಹೆಚ್ಚಾಗಿರುತ್ತಿತ್ತು.

ಸುಮಾರು 40 ಲಕ್ಷ ಜನ ದೇಶ ಬಿಟ್ಟು ಹೋಗಿದ್ದಾರೆ. ಇನ್ನೂ ಲಕ್ಷಾಂತರ ಜನರು ದೇಶದೊಳಗೇ ಸ್ಥಳಾಂತರಗೊಂಡಿದ್ದಾರೆ. ಪಶ್ಚಿಮ ಭಾಗದಲ್ಲಿ ಅತಿ ಹೆಚ್ಚಿನ ಒತ್ತಡವಿದೆ ಎಂದು ವಿಶ್ವ ಸಂಸ್ಥೆಯ ವಲಸೆ ಸಂಸ್ಥೆ ಅಂದಾಜಿಸಿದೆ. ದೇಶದ ಪಶ್ಚಿಮ ಭಾಗ ಹೆಚ್ಚು ಸುರಕ್ಷಿತವಾಗಿದೆ. ಈ ಭಾಗಕ್ಕೆ ಜನರು ಧಾವಿಸುತ್ತಿದ್ದಾರೆ. ಆದರೆ, ಇಷ್ಟೊಂದು ಜನರಿಗೆ ಆಶ್ರಯ ನೀಡುವ ವ್ಯವಸ್ಥೆ ಈ ಭಾಗದಲ್ಲಿ ಇಲ್ಲ.

ಉಳಿದುಕೊಳ್ಳಲು ಮನೆಗಳಿಲ್ಲದೇ ಟೆಂಟ್‌ಗಳು ಎಲ್ಲೆಡೆ ಕಂಡು ಬರುತ್ತಿವೆ. ಲೆವಿವ್ ನಗರದಲ್ಲಿ ಪರಿಸ್ಥಿತಿ ಇನ್ನಷ್ಟು ಹದಗೆಡುವ ಕಳವಳವಿದೆ.

ಉಕ್ರೇನ್ 75 ಲಕ್ಷ ಮಕ್ಕಳನ್ನು ಹೊಂದಿದೆ.15 ಲಕ್ಷ ಮಕ್ಕಳು ಈಗಾಗಲೇ ರಾಷ್ಟ್ರೀಯ ಗಡಿಗಳನ್ನು ದಾಟಿದ್ದಾರೆ. ಪುರುಷರ ಪ್ರಯಾಣದ ಮೇಲೆ ನಿರ್ಬಂಧ ಹೇರಲಾಗಿದೆ. ಹೀಗಾಗಿ ಮಕ್ಕಳನ್ನು ತಾಯಂದಿರೇ ಕರೆ ತರುತ್ತಿದ್ದಾರೆ. ತಂದೆಯಿಂದ ಮಕ್ಕಳ ಅಗಲಿಕೆ ಶಾಶ್ವತವಾಗಬಹುದು ಎಂಬ ಕಳವಳವೂ ಇದೆ.

ಕುಟುಂಬದಿಂದ ದೂರವಾದ ಮಕ್ಕಳು ವಲಸೆ ಬಂದಿದ್ದು, ಅವರ ಭವಿಷ್ಯವೂ ಕಳವಳಕಾರಿಯಾಗಿದೆ. ಮರಿಯೋಪುಲ್‌ನ ಆಸ್ಪತ್ರೆ ಹಾಗೂ ಹೆರಿಗೆ ವಾರ್ಡ್‌ಗಳ ಮೇಲೆ ರಷ್ಯಾ ನಡೆಸಿದ ದಾಳಿ ಆಘಾತ ತಂದಿತ್ತು. ಉಕ್ರೇನ್‌ನಲ್ಲಿ ಮನೆ ಇರದ ಮಕ್ಕಳಿಗೆ ನೆರವು ನೀಡುವ ವ್ಯಾಪಕ ವ್ಯವಸ್ಥೆ ಇದೆ. ಶೇ.1.3ರಷ್ಟು ಮಕ್ಕಳು ಇಂತಹ ತಾಣಗಳಲ್ಲಿದ್ದಾರೆ. ಇದು ಯುರೋಪ್‌ನಲ್ಲೇ ಅತಿ ಹೆಚ್ಚು ಪ್ರಮಾಣವಾಗಿದೆ. ಈ ಮಕ್ಕಳ ಭವಿಷ್ಯದ ಮೇಲೆ ಈಗ ಕರಾಳ ಛಾಯೆ ಹರಡಿದೆ.

## 24 ರಂದು ದಾವಣಗೆರೆ ವಿವಿ ಘಟಿಕೋತ್ಸವ

ದಾವಣಗೆರೆ, ಮಾ.19- ದಾವಣಗೆರೆ ವಿಶ್ವವಿದ್ಯಾನಿಲಯದ 9ನೇ ಘಟಿಕೋತ್ಸವವನ್ನು ಇದೇ ದಿನಾಂಕ 24 ರ ಗುರುವಾರ ವಿಶ್ವವಿದ್ಯಾನಿಲಯದ ಆವರಣದಲ್ಲಿ ಏರ್ಪಡಿಸಲಾಗಿದೆ.

ಘಟಿಕೋತ್ಸವದಲ್ಲಿ ವಿಶ್ವವಿದ್ಯಾನಿಲಯದ ಕುಲಾಧಿಪತಿಯೂ ಆಗಿರುವ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು ರ್‍ಯಾಂಕ್ ವಿಜೇತರಿಗೆ ಚಿನ್ನದ ಪದಕ ಪ್ರದಾನ ಮಾಡುವರು. ವಿಧಾನ ಪರಿಷತ್ ಮಾಜಿ ಸದಸ್ಯ, ಶಿಕ್ಷಣ ತಜ್ಞ ಪ್ರೊ.ಪಿ.ವಿ. ಕೃಷ್ಣಭಟ್ಟ ಘಟಿಕೋತ್ಸವ ಭಾಷಣ ಮಾಡುವರು. ಪಿಎಚ್.ಡಿ ಪದವೀಧರರಿಗೆ ಡಾಕ್ಟರೇಟ್ ಪದವಿ ಪ್ರದಾನ ಮಾಡುವರು.

## ರಾಣೇಬೆನ್ನೂರಿನಲ್ಲಿ ಇಂದು ವಿದ್ಯುತ್ ವ್ಯತ್ಯಯ

ಪಿಬಿ ರಸ್ತೆಯ ರಿಲಾಯನ್ಸ್ ಟ್ರೆಂಡ್ಸ್, ಶ್ರೀನಿವಾಸ ಹೋಂ ಅಪ್ಲೈಯನ್ಸ್, ಗುರುರಾಜ ಫರ್ನೀಚರ್ಸ್, ಜನ್ನು ಬಾರ್ ಅಂಡ್ ರೆಸ್ಟೋರೆಂಟ್, ಎಕ್ಸಿಸ್ ಬ್ಯಾಂಕ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 11 ರಿಂದ ಸಂಜೆ 5.30 ರವರೆಗೆ ವಿದ್ಯುತ್ ಇರುವುದಿಲ್ಲ.

## ಕಾಣೆಯಾಗಿದ್ದಾರೆ



ಹಾವೇರಿ ಜಿಲ್ಲೆ ಹಾನಗಲ್ ತಾಲ್ಲೂಕಿನ ಆಡೂರು ಗ್ರಾಮದ **ಶ್ರೀ ನೀಲಪ್ಪ ಶೇಷಪ್ಪನವರ್** ಅವರು ಜಾತ್ರೆಗೆಂದು ದಾವಣಗೆರೆಗೆ ಬಂದಿದ್ದು, ದಿ. 18.03.2022ರ ಶುಕ್ರವಾರ ಬೆಳಿಗ್ಗೆ ಎಸ್.ಎಂ. ಕೃಷ್ಣ ನಗರದಿಂದ ಆಕಸ್ಮಿಕವಾಗಿ ಕಾಣೆಯಾಗಿದ್ದಾರೆ.

ಸುಮಾರು 62 ವರ್ಷ ವಯಸ್ಸಿನ ನೀಲಪ್ಪ ಅವರು ಆರೋಗ್ಯದಿಂದಿದ್ದು, ಇವರು ಯಾರಿಗಾದರೂ ಸಿಕ್ಕಲ್ಲಿ ನಮಗಾಗಲೀ ಅಥವಾ ಹತ್ತಿರದ ಪೊಲೀಸ್ ಠಾಣೆಗಾಗಲೀ ತಿಳಿಸಬೇಕಾಗಿ ವಿನಂತಿ.

**ರಾಘವೇಂದ್ರ, 97310 08178, 72045 96900**

# ಅಪಾಯಕ್ಕೆ ಸಿಲುಕಿದ ಪ್ರಯಾಣಿಕ



ದಾವಣಗೆರೆ, ಮಾ.19- ಚಲಿಸುತ್ತಿದ್ದ ರೈಲಿಗೆ ಹತ್ತಲೆತ್ನಿಸಿ ಕೆಳಗೆ ಸಿಲುಕಿದ ಪ್ರಯಾಣಿಕನೋರ್ವ ರೈಲ್ವೆ ಪೊಲೀಸ್ ಠಾಣೆಯ ಸಿಬ್ಬಂದಿಯ ಕಾರ್ಯಕ್ಷಮತೆಯಿಂದ ಬದುಕುಳಿದಿರುವ ಘಟನೆ ನಗರದ ರೈಲ್ವೆ ನಿಲ್ದಾಣದಲ್ಲಿ ಇಂದು ನಡೆದಿದೆ. ರೈಲ್ವೆ ನಿಲ್ದಾಣದ ಪ್ಲಾಟ್ ಫಾರಂ ನಂ 2ರಲ್ಲಿ ರೈಲ್ವೆ ಪೊಲೀಸ್ ಸಿಬ್ಬಂದಿ ನಾಗರಾಜ್ ಅವರು ಕರ್ತವ್ಯ ನಿರ್ವಹಿಸುತ್ತಿದ್ದರು. ಈ ವೇಳೆ ಧಾರವಾಡದಿಂದ ಬೆಂಗಳೂರಿಗೆ ದಾವಣಗೆರೆ ಮಾರ್ಗವಾಗಿ ಹೊರಟ್ಟಿದ್ದ ಎಕ್ಸ್ ಪ್ರೆಸ್ ರೈಲು ಪ್ಲಾಟ್ ಫಾರಂಗೆ ಬಂದು ನಿಲ್ಲಿಸಿ ನಂತರ ಹೊರಟ ವೇಳೆ ಈ ರೈಲಿನಲ್ಲಿ ಪ್ರಯಾಣಿಸಲು ಓಡಿ ಬಂದು ರೈಲಿನ ಬೋಗಿಯನ್ನು ಹತ್ತಲು ಪ್ರಯತ್ನಿಸಿದಾಗ ಕಾಲು ಜಾರಿ ಕೆಳಗೆ ಬಿದ್ದರು. ಬೀಳುತ್ತಿರುವ ಪ್ರಯಾಣಿಕನನ್ನು ಗಮನಿಸಿದ ರೈಲ್ವೇ ಪೊಲೀಸ್ ನಾಗರಾಜ್ ಅವರು ಓಡಿ ಬಂದು ಪ್ರಯಾಣಿಕನ ಪ್ರಾಣ ರಕ್ಷಣೆ ಮಾಡಿದ್ದಾರೆ.

### ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ಹಿರಿಯ ನಾಗರಿಕರಿಗೆ, ಅಸ್ವಸ್ಥರಿಗೆ ಆದ್ಯತೆ ನೀಡಬೇಕು

ಮಾನ್ಯರೇ,

ದಾವಣಗೆರೆ ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ 60-70 ದಾಟಿದ ಹಿರಿಯ ನಾಗರಿಕರಿಗೆ, ನಿಲ್ಲುವುದಕ್ಕೆ ಶಕ್ತಿ ಇಲ್ಲದವರಿಗೆ, ಮಾನಸಿಕ ಅಸ್ವಸ್ಥರಿಗೆ, ಲೋ-ಶುಗರ್, ಲೋ-ಬಿ.ಪಿ. ಇರುವ ವಯೋವೃದ್ಧರಿಗೆ ತಮ್ಮ ಆಸ್ತಿ ರಿಜಿಸ್ಟ್ರೇಷನ್ ಮಾಡಿಸಲು ಮೊದಲ ಆದ್ಯತೆ ನೀಡಬೇಕೆಂದು ವಿನಂತಿಸುತ್ತೇನೆ. ಈ ವಿಷಯದ ಕುರಿತು ಶಾಸಕರು ಗಮನಹರಿಸುವಂತೆ ಕೋರುತ್ತೇನೆ.

- ಜಿ. ನರೇಂದ್ರರಾವ್


## ನಗರದಲ್ಲಿ ಇಂದು 'ದಾವಣಗೆರೆ ಗೃಹಿಣಿ' ಪ್ರಶಸ್ತಿ ಪ್ರದಾನ

ಕಲಾಕುಂಚ ಸಾಂಸ್ಕೃತಿಕ ಸಂಸ್ಥೆ ಮಹಿಳಾ ವಿಭಾಗದಿಂದ ಏರ್ಪಡಿಸಿದ್ದ ದಾವಣಗೆರೆ ಗೃಹಿಣಿ ಸ್ಪರ್ಧೆ ವಿಜೇತರಿಗೆ 'ದಾವಣಗೆರೆ ಗೃಹಿಣಿ' ಪ್ರಶಸ್ತಿ ಪ್ರದಾನ ಸಮಾರಂಭವು ಇಂದು ಸಂಜೆ 6 ಕ್ಕೆ ಚನ್ನಗಿರಿ ವಿರೂಪಾಕ್ಷಪ್ಪ ಧರ್ಮಶಾಲಾ ಕಲ್ಯಾಣ ಮಂಟಪದಲ್ಲಿ ನಡೆಯಲಿದೆ.


ವಿಜಯಪುರದ ಶ್ರೀಮತಿ ಗಿರಿಜಾ ಮಾಲಿ ಪಾಟೀಲ್ ಪ್ರಶಸ್ತಿ ಪ್ರದಾನ ಮಾಡುವರು. ಶ್ರೀಮತಿ ಹೇಮಾ ಶಾಂತಪ್ಪ ಪೂಜಾರಿ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳು : ಜಸ್ಟಿನ್ ಡಿಸೋಜ, ಸಾವಿತ್ರ ರೇವಣಸಿದ್ಧಪ್ಪ, ಮಂಜುಳಾ ಪ್ರಸಾದ್, ರಶ್ಮಿ ಭರತ್, ವಸಂತಿ ಮಂಜುನಾಥ.

## ನಾಯಕನಹಟ್ಟಿ : ಇಂದು ತಿಪ್ಪೇರುದ್ರ ಸ್ವಾಮಿ ತೇರು



ಚಳ್ಳಕೆರೆ ತಾಲ್ಲೂಕು ನಾಟಕನಹಟ್ಟಿ ಶ್ರೀ ಗುರು ತಿಪ್ಪೇರುದ್ರ ಸ್ವಾಮಿಯ ರಥೋತ್ಸವವು ಇಂದು ಜರುಗಲಿದೆ. ಇಂದು ಜನಪದ ಕಾಲವಿದರಿಂದ ವೈವಿಧ್ಯಮಯ ಮೆರವಣಿಗೆಯೊಂದಿಗೆ ಪ್ರಾತಃಕಾಲ ವೃಷಭ ವಾಹನಯುತ ಚಿಕ್ಕ ರಥೋತ್ಸವ ನಂತರ ನಾಯಕನಹಟ್ಟಿ, ತಳಕು, ಮನ್ನೆಕೋಟೆ, ಮಧ್ಯಾಹ್ನ 3 ರಿಂದ ದೊಡ್ಡ ರಥೋತ್ಸವ ಜರುಗಲಿದೆ.


ANVITH ENTERPRISES
FINANCIAL ADVISOR®
P.J. EXTENSION, DAVANGERE-577 004.

1) ಷೇರು ಮಾರುಕಟ್ಟೆಯಲ್ಲಿ ಹಣ ಹೂಡಿಕೆಯಿಂದ ನಷ್ಟವನ್ನು ಅನುಭವಿಸಿದ್ದೀರಾ ?

2) ಪ್ರತಿದಿನದ ಭಾರೀ ಏರುಪೇರಿನ ವಹಿವಾಟಿಗೆ ಹಣವನ್ನು ಹೇಗೆ ಹೂಡಿಕೆ ಮಾಡಬೇಕೆಂಬ ಗೊಂದಲವೇ? ಈ ಸಮಸ್ಯೆಗಳಿಂದ ಮುಕ್ತರಾಗಿ.

3) Long-Term ಮತ್ತು Short-Term ಹೂಡಿಕೆ ಮುಖಾಂತರ ಸುರಕ್ಷಿತವಾಗಿ ಉತ್ತಮ ಲಾಭವನ್ನು ಪಡೆಯಲು ಹಾಗೂ

4) ಪ್ರತಿ ತಿಂಗಳ ಸಾಲದ EMI ನಿಂದ ಮುಕ್ತರಾಗಿ ಮಕ್ಕಳ ಶಿಕ್ಷಣ ಮತ್ತು ನಿಮ್ಮ ನಿವೃತ್ತಿ ಜೀವನದ ನೆಮ್ಮದಿಯ ದಿನಗಳಿಗಾಗಿ ಉಳಿತಾಯದ ಹೆಜ್ಜೆಗೆ ಸಾಗಲು Children's Savings Plans, Retirement Plans, Income-Tax Saving Plans, Health plans, Term Plans ಹಾಗೂ ಆರ್ಥಿಕವಾಗಿ ಸಬಲರಾಗಲು ಸಂಪರ್ಕಿಸಿ :

VIJAYA NIRANJANA MYLARA-8792673593







# ದೇವನಗರಿಯಲ್ಲಿ ಹೋಳಿ ಸಂಭ್ರಮ...

ದಾವಣಗೆರೆ, ಮಾ.19- ನಗರದಲ್ಲಿ ಹೋಳಿ ಹಬ್ಬವನ್ನು ಸಂಭ್ರಮದಿಂದ ಆಚರಿಸಲಾಯಿತು. ಯುವಕರು, ಯುವತಿಯರು ಒಬ್ಬರಿಗೊಬ್ಬರ ಗುರುತು ಸಿಗದಷ್ಟು ಬಣ್ಣ ಹಚ್ಚಿಕೊಂಡು ಸಂಭ್ರಮಿಸಿದರು. ಮಕ್ಕಳೂ ಸಹ ಅಕ್ಕಪಕ್ಕ ಹಾಗೂ ಓಣಿಯ ಮಕ್ಕಳೊಂದಿಗೆ ಸೇರಿ ಪರಸ್ಪರ ಬಣ್ಣ, ಪಿಚಕಾರಿ ಹಿಡಿದು ಮನೆಯ ಮುಂದೆ ಹಾದು ಹೋಗುತ್ತಿದ್ದವರಿಗೆ ಬಣ್ಣದ ನೀರು ಸಿಡಿಸಿ ಸಂಭ್ರಮಿಸಿದರು.

ಕೋವಿಡ್ ಹಿನ್ನೆಲೆಯಲ್ಲಿ ಕಳೆದ ಎರಡ್ಮೂರು ವರ್ಷಗಳಿಂದ ಕಳೆಗುಂದಿದ್ದ ಹೋಳಿ ಸಂಭ್ರಮ ಇಂದು ಕಳೆಗಟ್ಟಿದಂತಿತ್ತು. ಮುಂಜಾನೆ 9 ಗಂಟೆ ವೇಳೆಗೆ ಬಣ್ಣದಾಟ ಆರಂಭವಾಗುತ್ತಾ, 11 ಗಂಟೆ ಸುಮಾರಿಗೆ ರಂಗೇರಿತು. 12ರ ನಂತರ ಯುವಕರ ದಂಡು ಮನೆಯತ್ತ ಹೆಜ್ಜೆ ಹಾಕಿದರು.

**ರಾಂ ಅಂಡ್ ಕೋ ಸರ್ಕಲ್ :** ಹೋಳಿ ಸಂಭ್ರಮವನ್ನು ನೋಡಬೇಕಾದರೆ ರಾಂ ಅಂಡ್ ಕೋ ವೃತ್ತಕ್ಕೆ ಬರಲೇ ಬೇಕು ಎನ್ನುವಷ್ಟರ ಮಟ್ಟಿಗೆ ಈ ಸ್ಥಳ ಫೇಮಸ್ ಆಗಿದೆ. ಮುಂಜಾನೆ ಸಂಬಂಧಿಗಳು, ಸ್ನೇಹಿತರಿಗೆ ಬಣ್ಣ ಹಚ್ಚಿ ಶುಭಾಶಯ ವಿನಿಮಯ ಮಾಡಿಕೊಂಡ ನಂತರ ಯುವಜನತೆ ಹರಿದು ಬರುವುದೇ ಈ ವೃತ್ತದತ್ತ. ಇನ್ನು ಜೋರು ಡಿಜೆ ಸದ್ದಿಗೆ ಯುವಕರು ಹುಚ್ಚೆದ್ದು ಕುಣಿಯುವುದನ್ನು ನೋಡಲೆಂದೇ ಹಲವರು ಬರುತ್ತಾರೆ. ಸಮೀಪದ ಕಟ್ಟಡಗಳನ್ನೇರಿ ವೀಕ್ಷಿಸುತ್ತಾರೆ. ಇಂದೂ ಸಹ ಹೋಳಿ ಸಂಭ್ರಮಕ್ಕಾಗಿಯೇ ಇಲ್ಲಿ ಡಿಜೆ ವ್ಯವಸ್ಥೆ ಮಾಡಲಾಗಿತ್ತು. 10ರ ನಂತರ ರಂಗು ರಂಗಿನ ಯುವಕರ ಗಂಪುಗಳು ವಿವಿಧ ರಸ್ತೆಗಳ ಮೂಲಕ ವೃತ್ತಕ್ಕೆ ಜಮಾಯಿಸ ತೊಡಗಿತು. ಡಿಜೆಯಲ್ಲಿ ಪುನೀತ್ ಹಾಡು ಬರುತ್ತಿದ್ದಂತೆ ಕುಣಿತ ಜೋರಾಗುತ್ತಿತ್ತು.

ಇನ್ನು ಒಬ್ಬರಿಗೊಬ್ಬರು ತಮ್ಮ ಮೈಮೇಲಿನ ಬಟ್ಟೆ ಹರಿದು ಕೊಂಡು ವಿದ್ಯುತ್ ಲೈನ್‌ಗೆ ತೂರುವ ಕೆಟ್ಟ ನಡೆಯೂ ಮುಂದು ವರೆದಿತ್ತು. ಹೋಳಿಯ ನಂತರ ವಿದ್ಯುತ್ ಇಲಾಖೆ ಹಾಗೂ ಫೈರ್ ಇಲಾಖೆಯವರು ಬಟ್ಟೆ ತೆಗೆಯಲು ಪ್ರಯಾಸ ಪಡಬೇಕಾಯಿತು.

ಚಿಕ್ಕ ಮಕ್ಕಳಿಗೆ ಇಲ್ಲಿನ ಸಂಭ್ರಮವನ್ನು ತೋರಿಸಲೆಂದೇ ಹೆತ್ತವರು ತಮ್ಮ ಮಕ್ಕಳನ್ನು ಕರೆ ತರುತ್ತಿದ್ದುದು ಕಂಡುಬಂತು. ಯುವತಿಯರು ಸಂಭ್ರಮಿಸಲು ಪ್ರತ್ಯೇಕ ವ್ಯವಸ್ಥೆ ಮಾಡಲಾಗಿತ್ತು. ಯುವಕರನ್ನೂ ನಾಚಿಸುವಂತೆ ಹಾಡಿಗೆ ನೃತ್ಯ ಮಾಡುತ್ತಾ ಯುವತಿಯರು ಸಂಭ್ರಮಿಸಿದರು.

ಉಳಿದಂತೆ ಜಾಲಿನಗರ, ನಿಟುವಳ್ಳಿ, ಕೆಟಿಜೆ ನಗರ, ವಿದ್ಯಾನಗರ, ಭಗತ್ ಸಿಂಗ್ ನಗರ, ಪಿ.ಜೆ. ಬಡಾವಣೆ, ಎಂ.ಸಿ.ಸಿ. ಬಡಾವಣೆ, ಆಂಜನೇಯ ಬಡಾವಣೆ ಮುಂತಾದ ಕಡೆಗಳಲ್ಲಿ ಹೋಳಿ ಹೆಚ್ಚಾಗಿತ್ತು. ಮಕ್ಕಳು, ಯುವಕರೊಟ್ಟಿಗೆ ಮಹಿಳೆಯರೂ ರಂಗಿನಾಟದಲ್ಲಿ ಪಾಲ್ಗೊಂಡಿದ್ದರು.

ಯುವಕರು ಬೈಕುಗಳಲ್ಲಿ ತ್ರಿಬಲ್ ರೈಡಿಂಗ್ ಹೋಗುತ್ತಾ ಅಬ್ಬರದ ಹಾರನ್ ಜೊತೆ ಊರು ತಿರುಗುತ್ತಿದ್ದರು. ಮತ್ತೆ ಕೆಲವರು ಮೈಮೇಲಿನ ಬಟ್ಟೆಗಳನ್ನೂ ಬಿಚ್ಚಿ ತೂರಾಡಿ ಬರಿ ಮೈಯಲ್ಲಿಯೇ ತಿರುಗುತ್ತಾ ಸಂಸ್ಕೃತಿಯನ್ನು ವಿಕೃತಿಯನ್ನಾಗಿಸಿದರು. ಮಹಿಳೆಯರ ಹಾಗೂ ಪುರುಷರ ಹಾಸ್ಟೆಲ್‌ಗಳಲ್ಲೂ ಹೋಳಿ ಸಂಭ್ರಮವಿತ್ತು.

**ನೈಸರ್ಗಿಕ ಬಣ್ಣದಾಟ:** ನಗರದ ಎಸ್.ಎಸ್. ಬಡಾವಣೆ ಎ ಬ್ಲಾಕ್, 8ನೇ ಕ್ರಾಸ್‌ನಲ್ಲಿ ನೈಸರ್ಗಿಕ ಬಣ್ಣಗಳಿಂದ ಹೋಳಿ ಆಚರಣೆ ಮಾಡಲಾಯಿತು.



ಮಹಿಳೆಯರಿಂದ ನೈಸರ್ಗಿಕ ಬಣ್ಣದಿಂದ ಹೋಳಿ ಆಚರಣೆ

ಹಣ್ಣು, ತರಕಾರಿ ಮತ್ತು ಅವುಗಳಿಂದ ತಯಾರಿಸಿದ ಮಿಶ್ರಣಗಳಿಂದ ಬಣ್ಣ ಮಾಡಿಕೊಂಡು ಪರಿಸರಕ್ಕೆ ಹಾನಿಯಾಗದಂತೆ ಹಬ್ಬ ಆಚರಿಸಿ ಮಾದರಿಯಾದರು.

ಕೃತಕ ಬಣ್ಣದಿಂದ ಪರಿಸರಕ್ಕೆ ಹಾನಿ ಜೊತೆಗೆ ನಮ್ಮ ಚರ್ಮಕ್ಕೂ ಹಾನಿ. ನೈಸರ್ಗಿಕ ಬಣ್ಣಗಳಿಂದ ಮುಖ ಕಾಂತಿ ಯುತವಾಗುತ್ತದೆ. ಕೂದಲಿಗೂ ಒಳ್ಳೆಯದು ಎಂದು ನೈಸರ್ಗಿಕ ಹೋಳಿ ನೇತೃತ್ವ ವಹಿಸಿದ್ದ ಸೌಮ್ಯ ಸತೀಶ್ ಹೇಳಿದರು.

ಸೌಮ್ಯ, ಶೈಲ, ಮಧುಮತಿ, ತನುಜ, ರತ್ನ, ಶಿಲ್ಪ, ಸ್ವಪ್ನ, ಸುರೇಖಾ, ಚೇತನ, ಸಾವಿತ್ರ, ದೀಪ , ಜ್ಯೋತಿ, ಸುಮಾ, ಕವಿತ, ಅನು ಮೊದಲಾದವರು ಇದ್ದರು.

# ಐ.ಒ.ಸಿ.ಗೆ ಗಂಗಾ ಬಯಲಿನ ಕೊಳಚೆ ನೀರು ಮಾರಾಟ

ನವದೆಹಲಿ ಮಾ. 19 – ಗಂಗಾ ನದಿಯ ಸ್ವಚ್ಛತೆಗಾಗಿ ಹೊರತೆಗೆಯಲಾದ ಕೊಳಚೆ ನೀರು ಹಾಗೂ ಕೊಳಕು ನೀರನ್ನು ಇಂಡಿಯನ್ ಆಯಿಲ್ ಕಾರ್ಪೊರೇಷನ್ (ಐ.ಒ.ಸಿ.ಎಲ್.)ಗೆ ಮಾರುವ ಮೂಲಕ ನಗದೀಕರಣಗೊಳಿಸುವ ಯೋಜನೆ ಇದೆ ಎಂದು ಹಿರಿಯ ಅಧಿಕಾರಿಗಳು ಹೇಳಿದ್ದಾರೆ.

ಗಂಗಾ ನದಿ ತಟಯಲ್ಲಿ ಪ್ರತಿದಿನ 12 ಸಾವಿರ ದಶಲಕ್ಷ ಕೊಳಚೆ ನೀರು ಉತ್ಪಾದನೆಯಾಗುತ್ತಿದೆ.

ಈ ನೀರನ್ನು ಸಂಸ್ಕರಿಸಿದ ನಂತರ ಐ.ಒ.ಸಿ. ಎಲ್.ಗೆ ಮಾರುವ ಯೋಜನೆ ಮುಂದಿನ ತಿಂಗಳಿನಿಂದ ಆರಂಭವಾಗಲಿದೆ ಎಂದು ಸ್ವಚ್ಛ ಗಂಗಾ ರಾಷ್ಟ್ರೀಯ ಯೋಜನೆಯ ಪ್ರಧಾನ ನಿರ್ದೇಶಕ ಅಶೋಕ್ ಕುಮಾರ್ ಹೇಳಿದ್ದಾರೆ.

ಮಥುರಾದಲ್ಲಿ ಮೊದಲು 20 ಎಂ.ಎಲ್.ಡಿ. ಸಂಸ್ಕರಿತ ನೀರನ್ನು ಮಾರಲಿದ್ದೇವೆ. ಅಲ್ಲಿ ಸಂಸ್ಕರಿತ ನೀರನ್ನು ತೈಲ ಸಂಸ್ಕರಣಾ ಘಟಕಕ್ಕೆ ಬಳಸಲಾಗುವುದು.ದೇಶದಲ್ಲಿ ಇದೇ ಮೊದಲ ಬಾರಿಗೆ ತೈಲ ಸಂಸ್ಕರಣಾ ಘಟಕವೊಂದು ಸಂಸ್ಕರಿತ ನೀರು ಬಳಸಲಿದೆ ಎಂದು ಕುಮಾರ್ ತಿಳಿಸಿದ್ದಾರೆ.

ಕೊಳಕು ಹಾಗೂ ಚರಂಡಿ ನೀರನ್ನು ಎಸ್.ಟಿ.ಪಿ.ಗಳ ಮೂಲ ಸಂಸ್ಕರಿಸಿ ಕೈಗಾರಿಕೆಗಳಿಗೆ ಮಾರಲಾಗುವುದು. ಸಂಸ್ಕರಿತ ನೀರು ಸ್ನಾನ ಮಾಡುವ ಗುಣಮಟ್ಟದ್ದಾಗಿರಲಿದೆ. ಕೈಗಾರಿಕೆಗಳು ಇದನ್ನು ಬಳಸುವುದರಿಂದ, ನೀರಿಗಾಗಿ ನದಿಗಳನ್ನು ಅವಲಂಬಿಸುವುದು ತಪ್ಪಲಿದೆ ಎಂದವರು ಹೇಳಿದ್ದಾರೆ.

ಈ ಹಿಂದೆ ಕೆಲವೇ ಎಸ್.ಟಿ.ಪಿ.ಗಳು ಕಾರ್ಯ ನಿರ್ವಹಿಸುತ್ತಿದ್ದವು. ಹೀಗಾಗಿ ಮರು ಬಳಕೆ ನೀರು ಕೈಗಾರಿಕೆಗಳಿಗೆ ಹೆಚ್ಚಾಗಿ ಸಿಗುತ್ತಿರಲಿಲ್ಲ. ಕೆಲ ಎಸ್.ಟಿ.ಪಿ.ಗಳು ವರ್ಷಗಟ್ಟಲೆ ವಿದ್ಯುತ್ ಸಂಪರ್ಕ ಸಹ ಹೊಂದಿರಲಿಲ್ಲ. ಈಗ ಪರಿಸ್ಥಿತಿ ಬದಲಾಗಿದೆ ಎಂದವರು ಹೇಳಿದ್ದಾರೆ.

ನದಿ ದಡದ ಉದ್ದಕ್ಕೂ ಔಷಧೀಯ ಸಸಿಗಳನ್ನು ನೆಡುವುದರ ಮೂಲಕ ನೈಸರ್ಗಿಕ ಕೃಷಿಗೆ ಉತ್ತೇಜನ ನೀಡುವ ಬಗ್ಗೆ ಆಯುಷ್ ಇಲಾಖೆಯ ಜೊತೆ ಚರ್ಚೆ ನಡೆಸುತ್ತಿದ್ದೇವೆ ಎಂದೂ ಅವರು ಹೇಳಿದ್ದಾರೆ.

ಗಂಗಾ ನದಿಯ ಸ್ವಚ್ಛತೆಯ ಜೊತೆಗೆ, ಆರ್ಥಿಕ ಅಂಶದ ಬಗ್ಗೆಯೂ ನಾವು ಗಮನ ಹರಿಸುತ್ತಿದ್ದೇವೆ. ಇದರಿಂದ ಸ್ವಚ್ಛತೆಯಲ್ಲಿ ಸುಸ್ಥಿರತೆ ಕಾಣಲು ಸಾಧ್ಯವಾಗುತ್ತದೆ ಎಂದು ಕುಮಾರ್ ಹೇಳಿದ್ದಾರೆ.

2015ರಲ್ಲಿ ಕೇಂದ್ರ ಸರ್ಕಾರ 20 ಸಾವಿರ ಕೋಟಿ ರೂ. ವೆಚ್ಚದ ನಮಾಮಿ ಗಂಗೆ ಯೋಜನೆ ಆರಂಭಿಸಿತ್ತು. ಗಂಗಾ ನದಿಯ ಸ್ವಚ್ಛತಾ ಕಾರ್ಯವನ್ನು ಬೃಹತ್ ಪ್ರಮಾಣದಲ್ಲಿ ಕೈಗೊಳ್ಳುವುದು ಇದರ ಉದ್ದೇಶವಾಗಿತ್ತು.

ಈ ಯೋಜನೆಯಡಿ 30,255 ಕೋಟಿ ರೂ. ವೆಚ್ಚದ 347 ಯೋಜನೆಗಳಿಗೆ ಚಾಲನೆ ನೀಡಲಾಗಿದೆ. ಕೊಳಚೆ ನೀರು ಸಂಸ್ಕರಣೆಯ ಸೌಲಭ್ಯ, ಕೈಗಾರಿಕೆಗಳಿಗೆ ನೀರು ಒದಗಿಸುವುದು, ಗ್ರಾಮೀಣ ನೈರ್ಮಲ್ಯ ಈ ಯೋಜನೆಗಳ ಪ್ರಮುಖ ಉದ್ದೇಶಗಳು.

## ಜೆ.ಆರ್. ಷಣ್ಮುಖಪ್ಪರಿಗೆ ಸಹಕಾರ ರತ್ನ ಪ್ರಶಸ್ತಿ




ದಾವಣಗೆರೆ,ಮಾ.19- ಸಹಕಾರ ಕ್ಷೇತ್ರದಲ್ಲಿ ಸಲ್ಲಿಸುತ್ತಿರುವ ಅನುಪಮ ಸೇವೆಗಾಗಿ ಕರ್ನಾಟಕ ಸರ್ಕಾರವು ಕೊಡಮಾಡುವ 'ಸಹಕಾರ ರತ್ನ' ಪ್ರಶಸ್ತಿಗೆ ನಗರದ ಹಿರಿಯ ಸಹಕಾರಿ ಧುರೀಣ ಜೆ.ಆರ್. ಷಣ್ಮುಖಪ್ಪ ಭಾಜನರಾಗಿದ್ದಾರೆ.

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದಿಂದ ನಾಳೆ ದಿನಾಂಕ 20ರ ಭಾನುವಾರ ಬೆಳಿಗ್ಗೆ 10 ಗಂಟೆಗೆ ಬೆಂಗಳೂರಿನಲ್ಲಿ ಏರ್ಪಾಡಾಗಿರುವ ಸಮಾರಂಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಷಣ್ಮುಖಪ್ಪ ಅವರಿಗೆ ಪ್ರಶಸ್ತಿಯನ್ನು ಪ್ರದಾನ ಮಾಡಲಿದ್ದಾರೆ.

## ಗೋಪನಾಳು : ನಾಳೆ ಶಿವಜ್ಞಾನ ಮಂದಿರದ ಉದ್ಘಾಟನೆ

ದಾವಣಗೆರೆ, ಮಾ. 19- ಗೋಪನಾಳು ಗ್ರಾಮದಲ್ಲಿ ನಾಡಿದ್ದು ದಿನಾಂಕ 21 ರಂದು ಸೋಮವಾರ ಬೆಳಿಗ್ಗೆ 11 ಗಂಟೆಗೆ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಶಿವಜ್ಞಾನ ಮಂದಿರದ ಉದ್ಘಾಟನಾ ಸಮಾರಂಭ ನಡೆಯಲಿದೆ. ಬ್ರಹ್ಮಾಕುಮಾರಿ ಲೀಲಾಜಿ ಕಾರ್ಯಕ್ರಮವನ್ನು ಉದ್ಘಾಟಿಸುವರು. ಹಳಿಯಾಳದ ಬ್ರಹ್ಮಾಕುಮಾರಿ ಪದ್ಮಾಜಿ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಗೋಪನಾಳು ಗ್ರಾಮ ಪಂಚಾಯತಿ ಅಧ್ಯಕ್ಷೆ ಫಾತೀಮಾ ಬೀ, ಉಪಾಧ್ಯಕ್ಷ ಗಿರೀಶ್, ಹದಡಿ ಪಿಎಸ್‌ಐ ಕೆ.ಎಸ್. ರೂಪ, ಸ್ಥಳ ದಾನಿಗಳಾದ ಡಿ.ಬಿ. ಓಂಕಾರಪ್ಪ, ಡಿ.ಬಿ. ಪರಮೇಶ್ವರಪ್ಪ, ಗ್ರಾ.ಪಂ. ಸದಸ್ಯರಾದ ಹೆಚ್.ಡಿ. ನಾಗರಾಜಪ್ಪ, ಡಿ.ಬಿ. ಕೆಂಚವೀರಪ್ಪ, ಬಿ.ಸಿ. ಮಲ್ಲಿಕಾರ್ಜುನ, ಶ್ರೀಮತಿ ಶಾಂತಮ್ಮ, ಗ್ರಾಮದ ಮುಖಂಡರಾದ ಎನ್.ಎಂ. ರಾಜಶೇಖರಯ್ಯ, ನಂಜುಂಡಪ್ಪ ಬೆಳವನೂರು, ಜಿ.ಕೆ. ಕರಿಬಸಪ್ಪ ಭಾಗವಹಿಸಲಿದ್ದಾರೆ.

## ಎಸ್ಸೆಸ್‌ರಿಂದ 'ಜೇಮ್ಸ್' ಚಿತ್ರ ವೀಕ್ಷಣೆ



ದಾವಣಗೆರೆ, ಮಾ.19- ನಗರದ ಎಸ್.ಎಸ್. ಮಾಲ್‌ನ ಚಿತ್ರಮಂದಿರದಲ್ಲಿ ಪುನೀತ್ ರಾಜಕುಮಾರ್ ಅಭಿನಯದ ಜೇಮ್ಸ್ ಚಿತ್ರವನ್ನು ಹಿರಿಯ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅವರು ಇಂದು ಸಂಜೆ ವೀಕ್ಷಿಸಿದರು. ಕೈಗಾರಿಕೋದ್ಯಮಿ ಅಥಣಿ ವೀರಣ್ಣ, ಹೋಟೆಲ್ ಉದ್ಯಮಿ ಅಣಬೇರು ರಾಜಣ್ಣ ಅವರುಗಳು ಎಸ್ಸೆಸ್ ಅವರೊಂದಿಗಿದ್ದರು.

## ಇಂದು ಎಸ್ಎಆರ್ ನಗರ ಹಿತರಕ್ಷಣಾ ಸಮಿತಿ ಸಭೆ

ಶ್ರೀ ಎಸ್.ಎ.ರವೀಂದ್ರನಾಥ ನಗರ ನಾಗರಿಕ ಹಿತರಕ್ಷಣಾ ಸಮಿತಿಯ ವಾರ್ಷಿಕ ಮಹಾಸಭೆಯನ್ನು ಸಂಘದ ಕಟ್ಟಡದ ಹಿಂಭಾಗದ ಆವರಣದಲ್ಲಿ ಕರೆಯಲಾಗಿದೆ ಎಂದು ಸಮಿತಿ ಅಧ್ಯಕ್ಷ ಎನ್.ಸಿದ್ದರಾಮಪ್ಪ ಮತ್ತು ಕಾರ್ಯದರ್ಶಿ ಎನ್.ವೀರಭದ್ರಪ್ಪ ತಿಳಿಸಿದ್ದಾರೆ.

# ಕಾವೇರುತ್ತಿರುವ ಕುಸ್ತಿ; ಇಂದು ಫೈನಲ್ ಜಟಾಪಟಿ



ದಾವಣಗೆರೆ,ಮಾ.19- ಇಲ್ಲಿನ ಬೀರಲಿಂಗೇಶ್ವರ ಕುಸ್ತಿ ಅಖಾಡದಲ್ಲಿ ಇಂದು ಅರವತ್ತಕ್ಕು ಹೆಚ್ಚು ಕುಸ್ತಿಗಳು ನಡೆದವು. ಯುವ ಜಟ್ಟಿಗಳು, ಅನುಭವಿ ಪಟುಗಳು ಡಾವು, ಪಟ್ಟುಗಳೊಂದಿಗೆ ಸೆಣಸಾಡಿ ಸೇರಿದ್ದ ಸಹಸ್ರಾರು ಪ್ರೇಕ್ಷರನ್ನು ರಂಜಿಸಿದರು.

ಅಕ್ಕ-ಪಕ್ಕದ ಜಿಲ್ಲೆಗಳಿಂದ ನೂರಾರು ಯುವ ಕುಸ್ತಿಪಟುಗಳು ಆಗಮಿಸಿದ್ದು, ಆಕರ್ಷಣೆಯ ಕೇಂದ್ರ ಬಿಂದುವಾಗಿದ್ದಾರೆ. ವಿಶೇಷವೆಂದರೆ ಗೆದ್ದಂತಹ ಪೈಲ್ವಾನರುಗಳು ಸ್ಥಳದಲ್ಲಿಯೇ ನಗದು ಬಹುಮಾನ ಗಳಿಸುತ್ತಿದ್ದಾರೆ. ವ್ಯವಸ್ಥಾಪಕರು ಕುಸ್ತಿ ಪಟು ಒಬ್ಬನನ್ನು ಅಖಾಡಕ್ಕೆ ಕರೆತಂದು, ಆತನ ಹೆಸರು, ಊರು ಹೇಳಿ ಈತನನ್ನು ಸೋಲಿಸಿದರೆ 1ರಿಂದ 15 ಸಾವಿರದವರೆಗೂ ನಗದು ಬಹುಮಾನ ನಿಗದಿ ಮಾಡಿ, ಸವಾಲು ಪ್ರಕಟಿಸಿ, ಆಡಿಸಲಾಗುತ್ತಿದ್ದು, ಗೆದ್ದವರಿಗೆ ಅಲ್ಲಿಯೇ ಬಹುಮಾನ ನೀಡಿ ಗೌರವಿಸಲಾಗುತ್ತಿದೆ. ನಿನ್ನೆ ಸೃಷ್ಟಿ ಮತ್ತು ಆರಾಧ್ಯ ಎಂಬ 12ರ ಬಾಲಕಿಯರ ಜೋಡಿ ಅಖಾಡಕ್ಕಿಳಿದಾಗ ಪ್ರೇಕ್ಷಕರು ಭಾರೀ ಕರತಾಡನ ಮಾಡಿ ಸ್ವಾಗತಿಸಿದ್ದು ವಿಶೇಷವಾಗಿತ್ತು.

ದಾವಣಗೆರೆ ಪೈಲ್ವಾನರು ಅಖಾಡಕ್ಕಿಳಿದಾಗ ಪ್ರೇಕ್ಷಕರು ಕೇಕೆ ಹಾಕಿ ಹುರಿದುಂಬಿಸುತ್ತಿದ್ದರೆ, ಗೆದ್ದಾಗ ಖುಷಿ, ಸೋತಾಗ ನಿರಾಸೆ ವ್ಯಕ್ತಪಡಿಸುತ್ತಿದ್ದರು. ಪಕ್ಕದ ಶಿವಮೊಗ್ಗ, ಹಾವೇರಿ, ರಾಣೇಬೆನ್ನೂರು, ಬೆಳಗಾವಿ, ವಿಜಯನಗರ ಅಲ್ಲದೇ ದೆಹಲಿ, ಮಹಾರಾಷ್ಟ್ರ, ಕೊಲ್ಲಾಪುರ, ಸಾಂಗ್ಲಿ, ಈಚಲ ಕಾರಂಜಿ, ಹರಿಯಾಣ ದಿಂದಲೂ ಕುಸ್ತಿಪಟುಗಳು ಆಗಮಿಸಿದ್ದಾರೆ.

ದುಗ್ಗಮ್ಮನ ಜಾತ್ರೆ ಅಂಗವಾಗಿ ನಡೆಯುತ್ತಿರುವ ಪಂದ್ಯಾವಳಿಯ ಕೊನೆಯ ದಿನವಾದ ನಾಳೆ ಭಾನುವಾರ ಹೆಸರಾಂತ ಕುಸ್ತಿಪಟುಗಳು ಎರಡು ಕೆ.ಜಿ.ಬೆಳ್ಳಿ ಗದೆ ಮತ್ತು 25 ಸಾವಿರ ನಗದು ಬಹುಮಾನ ಗಿಟ್ಟಿಸಲು ಸೆಣಸಾಡಲಿದ್ದಾರೆ.

ಸೇನೆಯಲ್ಲಿರುವ ದಾವಣಗೆರೆಯವರೇ ಆದ ಪೈಲಾನ್ ಟಿ.ಶ್ರೀನಿವಾಸ, ದೆಹಲಿಯ ಆಸಿಫ್ ಅಲಿ, ಬಂಟಿ, ಯೋಗೇಶ್, ಮುತ್ತುರಾಜ್, ದಾವಣಗೆರೆಯ ಪರಶುರಾಂ, ಸಾಂಗ್ಲಿಯ ಪ್ರಶಾಂತ್, ಬೆಳಗಾವಿಯ ಮೀರಾಸಾಬ್ ಮತ್ತಿತರೆ ಹೆಸರಾಂತ ಕುಸ್ತಿಪಟುಗಳು ಸಹ ಭಾಗವಹಿಸಿ ಸೆಣಸಾಡಲಿದ್ದಾರೆ.

ಕುಸ್ತಿಕಲೆಯನ್ನು ಉಳಿಸಿ, ಬೆಳೆಸುವ ಉದ್ದೇಶದಿಂದ ಪ್ರತಿ ದುಗ್ಗಮ್ಮನ ಜಾತ್ರೆಯಲ್ಲಿಯೂ ಕುಸ್ತಿ ಸ್ಪರ್ಧೆ ನಡೆಸಲಾಗುತ್ತಿದೆ, ಪ್ರಸ್ತುತ ಕುಸ್ತಿ ಪಂದ್ಯಾವಳಿ ಖರ್ಚಿಗಾಗಿ ಕನಿಷ್ಠ 20 ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗುತ್ತಿದೆ ಎಂದು ಸಮಿತಿಯ ಯಶವಂತರಾವ್ ಜಾಧವ್ ತಿಳಿಸಿದರು.

ಭಾರೀ ಪೈಪೋಟಿಯಿಂದ ನಡೆದಿರುವ ಕುಸ್ತಿ ಪಂದ್ಯಗಳ ತೀರ್ಪುಗಾರರಾಗಿ ಬಿ.ವೀರಣ್ಣ, ವೀರೇಶ್ ಪೈಲ್ವಾನ್, ಮನೋಹರ್, ಸಿದ್ದಪ್ಪ, ಕೋಳೂರು ಮುತ್ತಪ್ಪ ಮತ್ತಿತರರು ನಿರ್ವಹಿಸಿದರು.

ಪ್ರೇಕ್ಷಕರು ಕುಸ್ತಿ ಪಂದ್ಯಗಳನ್ನು ವೀಕ್ಷಿಸಲು ಗ್ಯಾಲರಿ ನಿರ್ಮಿಸಲಾಗಿದೆ. ಕುಸ್ತಿ ನೋಡಲು ಬಂದಂತಹ ಜನರಿಗೆ ಸನಿಹದಲ್ಲಿಯೇ ಇರುವ ಅಕ್ಕಮಹಾದೇವಿ ಕಲ್ಯಾಣ ಮಂಟಪದಲ್ಲಿ ಊಟದ ವ್ಯವಸ್ಥೆ ಮಾಡಲಾಗಿದೆ. ಪೊಲೀಸರ ಬಿಗಿ ಬಂದೋಬಸ್ತ್ ವ್ಯವಸ್ಥೆಯನ್ನು ಮಾಡಲಾಗಿದೆ.

ದೇವಸ್ಥಾನ ಸಮಿತಿಯ ಧರ್ಮದರ್ಶಿಗಳಾದ ಗೌಡ್ರ ಚನ್ನಬಸಪ್ಪ, ಜೆ.ಕೆ.ಕೊಟ್ರಬಸಪ್ಪ, ಗೋಣೆಪ್ಪ, ಗೌಡ್ರರಾಮಣ್ಣ, ಚನ್ನಪ್ಪ, ಮಾಲತೇಶ ರಾವ್, ಕರಿಗಾರ ಬಸಪ್ಪ, ಗೌಡರ ಅರುಣ್ ಮತ್ತಿತರರು ಇದ್ದರು.

# ಸಂಭ್ರಮದ ಕೊಡದಗುಡ್ಡದ ವೀರಭದ್ರೇಶ್ವರ ಸ್ವಾಮಿ ರಥೋತ್ಸವ



ಜಗಳೂರು, ಮಾ.19- ಕೊಡದಗುಡ್ಡದ ಶ್ರೀ ವೀರಭದ್ರೇಶ್ವರ ಸ್ವಾಮಿ ರಥೋತ್ಸವ ಅತ್ಯಂತ ವಿಜೃಂಭಣೆಯಿಂದ ನೆರವೇರಿತು.

ಬೆಳಿಗ್ಗೆ ದೇವಸ್ಥಾನದಲ್ಲಿ ಅಗ್ನಿಕುಂಡ ಮಹೋತ್ಸವ, ಮಹಾರುದ್ರಾಭಿಷೇಕ ಮೊದಲಾದ ವಿಶೇಷ ಪೂಜೆ ನೆರವೇರಿತು. ಸಂಜೆ ಅಲಂಕೃತ ಪಲ್ಲಕ್ಕಿಯಲ್ಲಿ ದೇವರ ಮೂರ್ತಿ ಪ್ರತಿಷ್ಠಾಪಿಸಿ ಮಂಗಳ ವಾದ್ಯದೊಂದಿಗೆ ಮೆರವಣಿಗೆ ಮೂಲಕ ಕರೆತಂದು ತೇರಿನೊಳಗೆ ಪ್ರತಿಷ್ಠಾಪಿಸಲಾಯಿತು.

ದೇವರ ಧ್ವಜ, ಹೂವಿನಹಾರದ ಹರಾಜು ಪ್ರಕ್ರಿಯೆ ನಡೆಯಿತು. ಈ ಬಾರಿಯ ಧ್ವಜ ಹರಾಜು ಪ್ರಕ್ರಿಯೆಯಲ್ಲಿ ವಟ್ಟೂರು ವಿಜಯ ಕುಮಾರ್ ಎಂಬುವರು 2.51 ಲಕ್ಷಕ್ಕೆ ಧ್ವಜವನ್ನು ತಮ್ಮದಾಗಿಸಿಕೊಂಡರು.

ಹರಾಜು ಪ್ರಕ್ರಿಯೆ ಮುಗಿಯುತ್ತಿದ್ದಂತೆ ನಂದಿಕೋಲು, ಡೊಳ್ಳುಕುಣಿತ, ಸಮಾಳ ಮೊದಲಾದ ಜಾನಪದ ಕಲಾತಂಡಗಳು ರಥೋತ್ಸವಕ್ಕೆ ಮೆರಗು ನೀಡಿದವು. ನೆರೆ ದಿದ್ದ ಭಕ್ತರು ತೇರಿನ ಕಳಸಕ್ಕೆ ಬಾಳೆಹಣ್ಣು ಎಸೆದು ತೂರುಬೆಲ್ಲ ಮೆಣಸು ಎರಚಿ ಭಕ್ತಿ ಅರ್ಪಿಸಿದರು. ದಾವಣಗೆರೆ, ಚಿತ್ರದುರ್ಗ, ವಿಜಯನಗರ, ಶಿವಮೊಗ್ಗ, ಹಾವೇರಿ ಮತ್ತು ಬಳ್ಳಾರಿ ಭಾಗದ ಭಕ್ತರು ತೇರಿಗೆ ಕಟ್ಟಿದ ಹಗ್ಗ ಹಿಡಿದು ರಥವನ್ನು ಪಾದಗಟ್ಟೆವರೆಗೆ ಎಳೆದುಕೊಂಡು ಹೋಗಿ ಪೂಜೆ ಸಲ್ಲಿಸಿ ಮರಳಿ ದೇವಸ್ಥಾನದ ಬಳಿ ಕರೆತಂದರು. ನಂತರ ಹರಕೆ ಹೊತ್ತ ಭಕ್ತರು ರಥದ ಗಾಲಿಗೆ ತೆಂಗಿನಕಾಯಿ ಒಡೆದು ನಮಿಸಿದರು. ಭಕ್ತರು ಶ್ರೀ ವೀರಭದ್ರೇಶ್ವರನಿಗೆ ತಾವು ಮನದಲ್ಲಿ ಮಾಡಿಕೊಂಡ ಹರಕೆಯನ್ನು ತೀರಿಸಿದರು.

ಭಕ್ತರಿಗೆ ವಿವಿಧ ಕಡೆಗಳಲ್ಲಿ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು. ಕೇವಲ ರಾಜ್ಯದಿಂದಷ್ಟೇ ಅಲ್ಲ, ಹೊರ ರಾಜ್ಯಗಳಿಂದಲೂ ಸಾವಿರಾರು ಭಕ್ತರು ರಥೋತ್ಸವದಲ್ಲಿ ಪಾಲ್ಗೊಂಡು ಪೂಜೆ ಸಲ್ಲಿಸಿದರು. ಕಲಾವಿದರಿಂದ ವೀರಗಾಸೆ ಕುಣಿತ, ಮಂಗಳವಾದ್ಯ ವೃಂದದ ಕುಣಿತ ಭಕ್ತರನ್ನು ಮಂತ್ರ ಮುಗ್ಧರನ್ನಾಗಿಸಿತು.

## ನಗರದಲ್ಲಿ ಇಂದು ಜಾನಪದ, ಭಕ್ತಿ ಗೀತೆ

ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿ ಜಾತ್ರೆ ಅಂಗವಾಗಿ ದೇವಸ್ಥಾನದ ಆವರಣದಲ್ಲಿ ನಡೆಯುತ್ತಿರುವ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಇಂದು ಸಂಜೆ 6.30ಕ್ಕೆ ಜಾನಪದ ಗೀತೆಗಳು ಮತ್ತು ಭಕ್ತಿ ಗೀತೆಗಳು 'ಹಳ್ಳಿ ಬ್ಯಾಂಡ್' ಕಾರ್ಯಕ್ರಮ ನಡೆಯಲಿದೆ.

ATHER

BELLAD GROUP OF COMPANIES is hiring for ATHER & MG BRANDS

HIRING

SALES EXECUTIVES - (DAVANGERE)

Exp: 1 year Sales Sal: 12K-18K CTC + Attractive Incentives

BELLAD GROUP OF COMPANIES

Call: 9686718809 / 7760985888

Send CV's to: resumes@belladandcompany.com

ಹೃದಯಪೂರ್ವಕ ಅಭಿನಂದನೆಗಳು



ದಾವಣಗೆರೆ ಜಿಲ್ಲಾ ವರದಿಗಾರರ ಕೂಟದ ನಿರ್ದೇಶಕರುಗಳಾಗಿ ಆಯ್ಕೆಯಾಗಿರುವ

'ಜನತಾವಾಣಿ' ವರದಿಗಾರರಾದ

ಶ್ರೀ ಎಸ್.ಎ. ಶ್ರೀನಿವಾಸ್,

ಶ್ರೀ ಬಿ. ಸಿಕಂದರ್,

ಶ್ರೀ ಕೆ.ಎನ್. ಬಸವರಾಜು ಅಣಬೇರು

ಅವರುಗಳಿಗೆ ಹೃದಯಪೂರ್ವಕ ಅಭಿನಂದನೆಗಳು.

ಜನತಾವಾಣಿ ಬಳಗ

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte